REGISTERED NO. M. 1393.

ಕಂಠೀರವ

ಉದರ್ಾಣೆ

ESTD. 1919 ಸ್ಥಾಪನೆ.

ವಾರಕ್ಕೆರಡಾವರ್ತಿ ಪ್ರಕಟವಾಗುವ ಶ್ರೇಷ್ಠವರ್ಗದ ಕನ್ನಡ ವಾರ್ತಾಪತ್ರಿಕೆ.

KANTEERAVA, MANGALORE

The only Nationalist Kanarese BI-WEEKLY with the largest circulation.

ಸಂಪುಟ ೧೪ ಮಂಗಳೂರು, ೧೯೩೬ನೇ ಇಸವಿ ಜುಲಾಯಿ ತಾರೀಕು ೩ನೇ ಶುಕ್ರವಾರ ಸಂಚಿಕೆ ೨೮.

VOL. XVIII MANGALORE, FRIDAY, JULY 3, 1936 NO. 28.

BANK with the

UDIPI BANK Ltd.

(KALSANK, UDIPI S. KANARA)

and thereby **DEFEND** your own interest.

ALL KINDS OF BANKING BUSINESS TRANSACTED.

ESTD: 1925

ESTD:—1906.

THE CANARA

BANKING CORPORATION, UDIPI, LTD.

ANNOUNCEMENT.

A Branch of the Corporation has been opened at SAKLASPUR (Hassan Dist.) and the public are cordially invited to transact their business at the said office.

M. SHRINIVAS PRABHU,
MANAGER.

ಪೊಪ್ಯುಲರ್

- ಬ್ರಿಟಿಷ್ ಕರ್ಣಾಟಕದ ಪ್ರಥಮ ವಿಮಾಸಂಸ್ಥೆ—ದಕ್ಷಿಣ ಕನ್ನಡದ ಆದರ್ಶ ವಿಮಾಸಂಸ್ಥೆ.
- ಪ್ರಥಮ ವರ್ಷದಿಂದಲೇ ವಿಮಾನಿಧಿ ಸ್ಥಾಪಿತವಾಗಿದ್ದು ಇದು ವರ್ಷಂಪ್ರತಿ ಬೆಳೆಯುತ್ತಾ ಇದೆ.
- ಪ್ರಥಮ ಮೌಲ್ಯವೇತನದಲ್ಲಿಯೇ ಬೋನಸ್—ಅಖಿಲ ಕರ್ಣಾಟಕದಲ್ಲಿ ಪ್ರಥಮ ಬಾರಿಯೇ ಬೋನಸನ್ನು ಹಂಚಿದ ಸಂಸ್ಥೆಯೆಂದರೆ ಇದೊಂದೇ.

ವಿಮೆಯನ್ನು ಮಾಡಲೂ, ಮಾಡಿಸಲೂ ಇದೀಗ ನಿಮ್ಮ ಸಂಸ್ಥೆ.
ಸುಲಭವಾದ ವಿಮಾಕಂತುಗಳು—ಸರ್ವರಿಗೂ ಅನುಕೂಲವಾದ ಅತ್ಯಾಧುನಿಕ ಶಾಸ್ತ್ರೀಯ ವಿಮಾಪದ್ಧತಿಗಳು—ಅಡಳಿತೆಯು ಸುವ್ಯವಸ್ಥಿತ—ಭದ್ರತೆಯು ವಿಶ್ವಾಸಾರ್ಹ.

ಯೋಗ್ಯ ವಿಜಂಟೆರುಗಳಿಗೆ ಧಾರಾಳ ಕವಿಶನ್.

ಮಾಹಿತಿಪತ್ರ ಇತ್ಯಾದಿ ಹೆಚ್ಚಿನ ವಿವರಗಳಿಗೆ ಮಂಗಳೂರಿನ ಮುಖ್ಯ ಕಾರ್ಯಾಲಯಕ್ಕೆ ಬರೆಯಿರಿ.

Asiatic Government Security
LIFE ASSURANCE CO., LTD.,

Established 1913. **Life Branch 1922.**

The Pioneer Insurance Institution in Mysore State transacting business throughout India. Varied plans of Assurances for both male and female lives at competitive rates. Attractive Policies with liberal privileges including Disability Benefits. Substantial Bonus. Profitable Agency Connections.

For Prospectus and Agency terms apply to:

Head Office: "Asiatic Buildings" Bangalore City,

OR

to any of the Company's undernoted Branches:

Madras Branch: 187, Mount Road.
Bombay Branch: Hornby Road, Fort.
Calcutta Branch: 15, Clive Street.

V. RANGASWAMI, B. A., B. L.,
General Manager.

ಶ್ರೇಷ್ಠತರಗತಿಯೇ ಅಧಿಕವ್ಯಾಪಾರದ ಲಕ್ಷಣ.

ಅದಕ್ಕಾಗಿಯೇ

"ರಾಜಾ ಸೈಕಲ್"

ಸಾಹಿತ್ಯಗಳು, ರಚನೆ ಮತ್ತು ಸೊಬಗು ಇವುಗಳಲ್ಲಿ ಅತ್ಯುತ್ತಮವಾದುದೆಲ್ಲವೂ ಇದರಲ್ಲಿ ಇದೆ.

ಸ್ವಾಕಿಪ್ಪರು:—ದಿ ಸಿಟಿ ಸೈಕಲ್ ಕೋ., ಮಂಗಳೂರು.

ಹೆಚ್ಚು ಮಾಹಿತಿಗೆ:—
ಸೋಲ್ ಕನ್ಸೆಷನೇರ್ಸ್‌ಯವರಿಗೆ ಬರೆಯಿರಿ.

ರಾಜಾ ಸೈಕಲ್ ಅಂಡ್
ಮೋಟಾರ್ ವರ್ಕ್ಸ್,
"ರಾಜಾ ಬಿಲ್ಡಿಂಗ್ಸ್", ನರಸಿಂಹರಾಜಾ ರೋಡ್,
ಬೆಂಗಳೂರು ಸಿಟಿ,
ದಕ್ಷಿಣ ಇಂಡಿಯ.

WANTED

WANTED candidates for Telegraph and Station Master Class. Allowance Rs. 28. Uniform, passage and quarter free. Service essential. Rules and entrance form on annas eight. Director, Royal Telegraph and Rly. Duties College.

6, 29-5. Bombay No. 14.

Jubilee Stamps.

5 different from 5 different colonies for 5 as., 25 different from at least 10 different colonies Rs. 2—8—0. Grand collection of 100 different, used and unused, including many scarce stamps and high values, Rs. 25/—

Special Offer:— Commemorative packet of 30 different large pictorial stamps of Centenary, Quiniversary, Jubilee and Charity issues, a packet full of historic and artistic interest. Included in this packet are 4 unused Russia Romanoff 1913 issue (Nicholas II and Katherine II) and Belgium, Queen Astrid mourning stamp. **Price Re. 1 only.**

Remit by M. O. Write your order on coupon giving name and address clearly. This is the safest and economical method of ordering.

Abyssinia and Jubilee lists free to all applicants.

IMPERIAL STAMP Co., Ltd., ALLAHABAD.

4, 5-6.

ಮೋಸಹೋಗಬೇಡಿ!

ಶ್ರೀ ಅಂಬಾಳ್ ಮದರಾಸು ನಶ್ಯವು ಅನೇಕ ವರ್ಷಗಳಿಂದ ಅಸಮಾನವಾದ ಮತ್ತು ಶಾಶ್ವತವಾದ ಕೀರ್ತಿಯನ್ನು ಹೊಂದಿ ಜಗತ್ಪ್ರಸಿದ್ಧವಾಗಿರುವುದನ್ನು ಅರಿತು ಕೆಲವರು ಹಣದಾಸೆಯುಳ್ಳವರಾಗಿ ಕರಿದು ಹೊಗೆಸೊಪ್ಪನ್ನು ತರಿಸಿ ಅವುಗಳಲ್ಲಿರುವ ಮಣ್ಣು ಮುಂಬು, ಮಸಿಗಳನ್ನು ತೆಗೆಯದೆ ಬೆರಕೆ ತುಪ್ಪವನ್ನು ಸೇರಿಸಿ ನಶ್ಯವನ್ನು ತಯಾರಿಸಿ ವ್ಯಾಪಾರಸ್ಥರಲ್ಲಿ ಹೋಗಿ ಕಡಿಮೆ ಬೆಲೆಗೆ ಸಾಲವಾಗಿ ಕೊಟ್ಟು ಬರುವರು. ಕೆಲವು ವ್ಯಾಪಾರಸ್ಥರು ಸರಸವಾಗಿಯೂ ಸಾಲವಾಗಿಯೂ ಸಿಗುವುದರಿಂದ ಮೇಲ್ಕಂಡ ಹಲ್ಕಾ ನಶ್ಯವನ್ನು ತರಿಸಿ ಇದೇ ಹಸನಾದ ಮದರಾಸು ನಶ್ಯವೆಂದು ಬೆಕರಿ ಮಾಡಿ ಬರುತ್ತಿರುವರು. ಸಹೋದರರೇ! ಮೋಸಹೋಗಬೇಡಿ. ಇಂಥಾ ಪೋಲಿ ನಶ್ಯವನ್ನು ಉಪಯೋಗಿಸಿದರೆ ಮೇಲ್ಕಂಡ ನಶ್ಯದಲ್ಲಿರುವ ಮಣ್ಣು, ಮಸಿ ಮೊದಲಾದವುಗಳು ಮೂಗಿನ ಮೂಲಕ ಮೆದುಳಿಗೆ ಹೋಗಿ ಮೆದುಳನ್ನು ಬಲೆಯೋಪಾದಿಯಲ್ಲಿ ಮುಚ್ಚಿಕೊಂಡು ಅಜ್ಞಾನವನ್ನುಂಟುಮಾಡುವುದು, ನಾಸಿಕದ್ವಾರವನ್ನು ಬಂಧಿಸುವುದು. ಮೂಗಿನಲ್ಲಿ ವ್ರಣವನ್ನುಂಟುಮಾಡುವುದಲ್ಲದೆ ಪಂಚೇಂದ್ರಿಯಗಳ ಶಕ್ತಿಯನ್ನು ಕುಂಠಿಸುವದು. ಆದುದರಿಂದ, ಆಪ್ತರೇ, ಅನೇಕ ವರ್ಷಗಳಿಂದ ಅನೇಕ ಡಾಕ್ಟರುಗಳಿಂದಲೂ, ಜಡ್ಜಿಗಳಿಂದಲೂ, ಇನ್ನೂ ಅನೇಕ ಶ್ರೀಮಂತರಿಂದಲೂ ಶ್ಲಾಘಿಸಲ್ಪಟ್ಟಿರುವ ಶ್ರೀ ಅಂಬಾಳ್ ಅಂಡ್ ಕಂಪೆನಿ, ಪೋಸ್ಟ್ ಬಾಕ್ಸ್ ನಂ. ೩, ಮದರಾಸು, ಇವರ ಮದರಾಸು ನಶ್ಯ, ಸುಗಂಧ ನಶ್ಯವನ್ನೇ ಉಪಯೋಗಿಸಿ ಆನಂದಪಡಿರಿ. ಎಲ್ಲಾ ವ್ಯಾಪಾರಸ್ಥರಲ್ಲಿಯೂ ಸಿಗುವುದು.

FREE,—ಉಚಿತ್,—ಪುಕಸಟ್ಟೆ!

ಮಹನೀಯರೆ,

ವಾಚನಾಲಯಗಳಲ್ಲಿಡಲು ಯೋಗ್ಯವಾದ ಮತ್ತು ಅಂದವಾದ ಬೈಂಡಿನ ಪುಸ್ತಕಗಳು, ಪ್ರತಿಯೊಬ್ಬರು ಓದಬೇಕಾದ ಕನ್ನಡ **ಕಥೆ ಪುಸ್ತಕ, ನಾಟಕ, ಕೀರ್ತನೆ ಲಾ ಪುಸ್ತಕಗಳು** ಮತ್ತು **ರಾಮಾಯಣ, ಭಾಗವತ, ಭಾರತ,** ವಗೈರೆಗಳಿಂದ ನಿಬಿಡೀಕೃತವಾಗಿ ಈಗಲೆ ಹೊರಗೆ ಬಂದಿರುವ **ಕ್ಯಾಟಲಾಗಿಗೆ** ಕೂಡಲೇ ಕೆಳಗಿನ ವಿಳಾಸಕ್ಕೆ ಬರೆದು ತರಿಸಿಕೊಳ್ಳಬೇಕಾಗಿ ವಿನಂತಿ.

ಶ್ರೀ ಸರಸ್ವತೀ ಭಂಡಾರ,
ಪ್ರಸಿದ್ಧ ಪುಸ್ತಕ ವ್ಯಾಪಾರಿಗಳು ಮತ್ತು ಪ್ರಕಾಶಕರು.
ಅವಿನ್ಯೂ ರೋಡ್, ಬೆಂಗಳೂರು, ಸಿಟಿ.

ಜರ್ಮನಿಯಲ್ಲಿ ರೈತರು.

ಸರ್ ಟಿ. ವಿಜಯರಾಘವಾಚಾರ್ಯರು ಮದ್ರಾಸು ಪ್ರಾಂತದಲ್ಲಿ ಹಲವು ದೊಡ್ಡ ಅಧಿಕಾರಗಳನ್ನು ವಹಿಸಿ, ಕೊನೆಗೆ ಇಂಡಿಯಾ ಸರಕಾರದ ಎಗ್ರಿಕಲ್ಚರಲ್ ರಿಸರ್ಚ್ ಇಂಪೀರಿಯಲ್ ಕೌನ್ಸಿಲಿನ ವೈಸ್‌ಚೆಯರ್ಮನರಾಗಿ ಪೆನಶನ್ ಹೊಂದಿದವರು, ಯುರೋಪಿನ ಹಲವು ದೇಶಗಳಲ್ಲಿ ಸುತ್ತಾಡಿ, ಅಲ್ಲಿಯ ವಿವಿಧ ರಾಜಕೀಯ ಮತು ಸಾಂಪತ್ತಿಕ ವಿಚಾರದ ಸಂಸ್ಥೆಗಳನ್ನು ಪರಿಶೀಲಿಸಿ ತುಂಬಾ ಅನುಭವ ಪಡೆದವರು. ರಾಜಕೀಯ ವಿಚಾರಗಳಲ್ಲಿ ಇಂಗ್ಲೆಂಡಿನ ಲಿಬರಲ್ ಪಕ್ಷದ ಪ್ರಾಚೀನ ಪ್ರಸಿದ್ಧ ಲೇಖಕರ ಗ್ರಂಥಗಳನ್ನು ಓದಿ ಮನನಮಾಡಿ ಅವುಗಳ ತತ್ವಗಳನ್ನು ತಾನು ಅನುಸರಿಸುವವನೆಂದು ಸ್ಪಷ್ಟವಾಗಿ ನುಡಿದು, ಜರ್ಮನಿಯಲ್ಲಿ ರೈತಾಪಿ ಜನಗಳ ಉದ್ಧರಣೆಗೆ ಏನೇನು ಏರ್ಪಾಡುಗಳು ನಡೆದಿವೆ ಎಂಬುದನ್ನು ವಿವರಿಸುವ ಲೇಖನವೊಂದನ್ನು ಬರೆದಿದ್ದಾರೆ. ಅದು 'ಹಿಂದೂ' ಪತ್ರಿಕೆಯ ಜೂನ್ ೨೧ನೇ ತಾರೀಕಿನ ಸಂಚಿಕೆಯಲ್ಲಿ ಪ್ರಕಟವಾಗಿದೆ. ಅದರಲ್ಲಿ ಬರೆದ ಸಂಗತಿಗಳನ್ನು ನಮ್ಮ ದೇಶದ ಜನರು ಗಮನಿಸಬೇಕೆಂದು ಶ್ರೀ ವಿ. ರಾಘವಾಚಾರ್ಯರೇ ಅಂದಿದ್ದಾರೆ. ಜರ್ಮನಿಯಲ್ಲಿಯೂ ಇಟೆಲಿಯಲ್ಲಿಯೂ ಮಹಾಯುದ್ಧದ ಮುಂಚೆ ಇದ್ದ ವ್ಯಕ್ತಿ ಸ್ವಾತಂತ್ರ್ಯವು ಅಳಿದುಹೋಗಿದೆಯಲ್ಲ ಎಂಬ ಇವರ ಪ್ರಶ್ನೆಗೆ ಈ ಎರಡು ದೇಶಗಳಲ್ಲಿಯೂ 'ಫಲದಿಂದಲೇ ಮರದ ಗುಣಪರೀಕ್ಷೆಯಾಗಬೇಕು' ಎಂದು ಉತ್ತರ ಹೊರಟಿತಂತೆ. ಅಂದರೆ ಜನತೆಯ ಸುಖಜೀವನದ ಉದ್ದೇಶವನ್ನಿಟ್ಟು ಕೊಂಡು ಮಾಡಿದ ವ್ಯವಸ್ಥೆಯಿಂದ ವ್ಯಕ್ತಿ ಸ್ವಾತಂತ್ರ್ಯಕ್ಕೆ ತುಸು ಲೋಪಬಂದರೂ ಪರ್ವಾಯಿಲ್ಲ ಎಂಬುದೇ ಈ ಜನರ ಹೇಳಿಕೆಯಂತೆ.

ರೋಮಿನಲ್ಲಿ ಮುಸೊಲಿನಿಯು ತನ್ನ ಅನುಯಾಯಿಗಳ ಜತೆಯಲ್ಲಿ ೧೯೨೨ನೇ ಇಸವಿಯ ಒಕ್ಟೋಬರ ತಿಂಗಳಲ್ಲಿ ಪ್ರವೇಶಮಾಡಿ ಅಧಿಕಾರಸೂತ್ರಗಳನ್ನು ಕೈವಶಮಾಡಿಕೊಂಡ ನಂತರವೂ ೧೯೨೫ನೆ ಇಸವಿಯ ಜನವರಿ ತಿಂಗಳಲ್ಲಿ ಹಿಟ್ಲರನಿಗೂ ಜರ್ಮನಿಯ ಪ್ರೆಸಿಡೆಂಟ ಹಿಂಡನಬರ್ಗನಿಗೂ ಒಪ್ಪಂದವಾಗಿ ಹಿಟ್ಲರನು ಜರ್ಮನಿಯ ರಾಜ್ಯಸೂತ್ರಗಳನ್ನು ಕೈಕೊಂಡ ನಂತರವೂ ಈ ಎರಡೂ ರಾಜ್ಯಗಳಲ್ಲಿ ಅವ್ಯವಸ್ಥೆಯು ತೊಲಗಿ, ಜನರ ಸ್ಥಿತಿಯು ವಿಶೇಷ ರೀತಿಯಿಂದ ಬಲಿತುಕೊಳ್ಳಲಿಕ್ಕೆ ಸಾಧ್ಯವಾಯಿತು; ಮಾತ್ರವಲ್ಲ, ಜರ್ಮನಿಯ ಮತ್ತು ಇಟೆಲಿಯ ವಿಷಯದಲ್ಲಿ ಇತರ ರಾಜ್ಯಗಳಿಗೆ ಭಯಗರ್ಭಿತ ಅಭಿಮಾನವು ತಲೆದೋರಿದೆ ಎಂದು ಶ್ರೀ ವಿಜಯರಾಘವಾಚಾರ್ಯರು ಅನ್ನುತ್ತಾರೆ.

ರಾಜ್ಯದ ಮುಖ್ಯ ಕರ್ತವ್ಯವು ಜನತೆಯ ಸ್ಥಿತಿಯನ್ನು ವೃದ್ಧಿಗೊಳಿಸುವುದೇ ಇರುವುದರಿಂದ ಇದಕ್ಕೆ ಪ್ರತಿಬಂಧಕವಾದ ಯಾವ ಸಂಸ್ಥೆ ಅಥವಾ ವ್ಯಕ್ತಿಯನ್ನು ನಿರ್ದಾಕ್ಷಿಣ್ಯದಿಂದ ಕಿತ್ತು ಹಾಕಿ ತನ್ನ ಶಕ್ತಿಯನ್ನು, ಸಾಮರ್ಥ್ಯವನ್ನು, ಜನತೆಯ ಅಭಿವೃದ್ಧಿಯ ಕಡೆಗೆ ವಿನಿಯೋಗಿಸಬೇಕೆಂದು ಈ ಸೂತ್ರಧಾರಿಗಳ ಉದ್ದೇಶ. ಇದನ್ನು ಅವರು ಹೇಗೆ ಉಪಯೋಗಿಸಿದ್ದಾರೆ ಎಂದು ಸರ್ ವಿಜಯರಾಘವಾಚಾರ್ಯರು ಹೀಗೆ ವಿವರಿಸಿದ್ದಾರೆ:—೬೦೦ ಎಕ್ರೆಗಳಿಗಿಂತ ಮಿಕ್ಕಿದ ಆಸ್ತಿಯು ಒಬ್ಬನ ಕೈಯಲ್ಲಿದ್ದರೆ ಅದನ್ನು ಕೂಡಲೇ ಆಸ್ತಿ ಇಲ್ಲದವರಿಗೆ ಹಂಚಿಕೊಡುವುದು. ಮ್ಯೂನಿಲಿಕರು ಅನೇಕ ಸಂದರ್ಭಗಳಲ್ಲಿ ತಮ್ಮ ಆಸ್ತಿಯ ಅಂಶವನ್ನು ಪಾಳು ಬೀಳಗೊಡುವ ಬದಲಾಗಿ ತಾವಾಗಿಯೇ ಸರಕಾರಕ್ಕೆ ಒಪ್ಪಿಸಿಕೊಟ್ಟಿದ್ದಾರೆ. ಇದಕ್ಕೆ ಈ ಮ್ಯೂನಿಲಿಕರು ಪ್ರತಿಫಲ ಹೊಂದುತ್ತಿದ್ದರೋ, ಎಷ್ಟನ್ನು ಹೊಂದುತ್ತಿದ್ದರು ಎಂಬದನ್ನು ಈ ಲೇಖಕರು ವಿವರಿಸಿಲ್ಲ.

೬೦೦ ಎಕ್ರೆಗಳಿಗಿಂತ ಕಡಿಮೆ ವಿಸ್ತೀರ್ಣದ ಆಸ್ತಿಗಳನ್ನು ವರ್ಗದಾರರು ಅಡವು ವಿಕ್ರಯ ಇತ್ಯಾದಿ ವರಾಧೀನ ಮಾಡುವುದಾಗಲಿ ನಿರ್ಣಯಿಸುವುದಕ್ಕೆ ಪ್ರತ್ಯೇಕ ಒಂದು ಕೋರ್ಟು ಇದೆ. ಅದರ ಹುಕುಂ ಪಡೆಯಬೇಕು. ಈ ಆಸ್ತಿಯನ್ನು ಕುಟುಂಬದ ಪೈಕಿ ಒಬ್ಬನು–ಆತನು ಹಿರಿಯವನೆ ಆಗಬೇಕೆಂದಿಲ್ಲ–ನಿಗೆವಾನಿ ನೋಡಬೇಕು. ಅದರಲ್ಲಿ ದೋಷ ಬಂದರೆ ಅವನಿಂದ ಆಡಳಿತ ತಪ್ಪಿಸಿ ಆ ಕುಟುಂಬದಲ್ಲಿ ಬೇರೊಬ್ಬರಿಗೆ ಒಪ್ಪಿಸಿಕೊಡುವ ಅಧಿಕಾರವು ಈ ಕೋರ್ಟಿಗೆ ಇದೆ. ಆಸ್ತಿಯ ಆಡಳಿತೆ ನೋಡುವವನು ಕುಟುಂಬದ ಎಲ್ಲಾ ಜನರ ಆರೈಕೆ ಮತ್ತು ಶಿಕ್ಷಣದ ಭಾರವನ್ನು ವಹಿಸಿ ಆಸ್ತಿಯಿಂದ ವೆಚ್ಚನೂಡಬೇಕು. ಇದು ಹಿಂದು ವಿತಾಕ್ಷರಿ ಕಾನೂನಿನ ಮೇರೆಗೆ ಇರುವ ಅವಿಭಕ್ತ ಕುಟುಂಬದ ಸಾಂಪ್ರದಾಯವೇ. ಆದರೆ ಈ ಅವಿಭಕ್ತ ಕುಟುಂಬದಲ್ಲಿ ಒಂದು ಗಂಡು ಮಗು ಹುಟ್ಟಿದೊಡನೆ ಅದಕ್ಕೆ ಕುಟುಂಬದ ಆಸ್ತಿಯಲ್ಲಿ ಪಾಲು ಇರುವುದರಿಂದ ಎರಡು ಮೂರು ತಲೆದಾಟುವಷ್ಟರಲ್ಲಿ ಆಸ್ತಿಯು ತೀರಾ ಖಂಡಖಂಡವಾಗಿ ಕುಟುಂಬದ ಸ್ಥಿತಿಯು ಹಾಳಾಗುತ್ತದೆ. ಕೊಡಗಿನಲ್ಲಿ ಜಮ್ಮದ ಕೊಡಗರ ಆಸ್ತಿಯಲ್ಲಿ ಸರಕಾರವೂ ಕಾನೂನುವಿಭಜನೆಯನ್ನು ಅಂಗೀಕರಿಸುವುದಿಲ್ಲ. ಹಿರಿಯನೇ ಆಸ್ತಿಯ ಸರ್ವಾಧಿಕಾರಿ, ಕುಡ್ತಲೆದಾರ. ಆದರೂ ಕುಟುಂಬದ ಅಣ್ಣತಮ್ಮಂದಿರು ತಮ್ಮೊಳಗೆ ಪಾಲುಮಾಡಿಕೊಂಡು ಪ್ರತ್ಯಪ್ರತ್ಯೇಕ ಜೀವನ ನಡಿಸುತ್ತಾರೆ. ಇವರಿಗೆ ಕುಟುಂಬದ ಮನೆಗೆ ಬಂದರೆ ಇರಲಿಕ್ಕೆ ಕೋಣೆಗಳು ಪ್ರತ್ಯೇಕವಿವೆ. ಜಮ್ಮದ ಕುಟುಂಬದವರು ಪಾರಂಪರ್ಯವಾಗಿ ಅನುಭವಿಸಿ ಬರಬಹುದಲ್ಲದೆ ವಿಕ್ರಯಿಸಕೂಡದು. ಅದನ್ನು ವಿಕ್ರಯಿಸಿದರೂ ಸಿಂಧುವಾಗುವುದಿಲ್ಲ. ಅಷ್ಟೆ ಅಲ್ಲ, ಆಸ್ತಿಗೆ ಸಂಬಂಧಪಟ್ಟ ಯಾವ ಸ್ಥಿರಸೊತ್ತನ್ನೂ ಮಾರ ಕೂಡದೆಂದು ನಿರ್ಬಂಧವಿದೆ. ಈ ಜಿಲ್ಲೆ ಮತ್ತು ಮಲಬಾರು ಜಿಲ್ಲೆಯಲ್ಲಿ ರೂಢಿಯಲ್ಲಿರುವ ಅಳಿಯಕಟ್ಟಿನ ಕ್ರಮದಲ್ಲಿ ಆಸ್ತಿಯನ್ನು ಕುಟುಂಬದವರು ವಿಭಜನೆ ಮಾಡಿಕೊಂಡರೂ ಕುಡ್ತಲೆದಾರನೇ ಸರಕಾರಕ್ಕೆ ಜವಾಬ್ದಾರ. ಆಸ್ತಿಯನ್ನು ವಿಕ್ರಯಿಸಲಿಕ್ಕೆ ಕುಟುಂಬದ ಎಲ್ಲಾ ಮೆಂಬರರು ಸೇರಬೇಕು. ಆಸ್ತಿಯ್ಲು ಮಕ್ಕಳಿಗೆ ಹೋಗುವುದಿಲ್ಲ, ಸೋದರ ಅಳಿಯಂದಿರಿಗೆ ಸೇರುತ್ತದೆ. ಯಜಮಾನನನ್ನು ಆಡಳಿತೆಯಿಂದ ತಪ್ಪಿಸಬಹುದೆಂಬ ಅಧಿಕಾರವು ಕಿರಿಯ ಮೆಂಬರರಿಗೆ ಇದ್ದರೂ ಇಂಥ ವ್ಯಾಜ್ಯದ ತೀರ್ಮಾನಕ್ಕೆ ಹೇರಳ ಖರ್ಚೂ ಕಾಲವ್ಯಯವೂ ಆಗುವುದರಿಂದ ಅದು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಹೀಗಾಗಿ ಒಳಗೊಳಗೇ ವೈಷಮ್ಯ, ದ್ವೇಷ, ಲೂಟಿ, ಖೂನಿಗಳ ತೌರಮನೆಯಾಗುತ್ತದೆ. ಜರ್ಮನಿಯಲ್ಲಿ ಹಲವು ಹಳ್ಳಿಗಳಿಗೆ ಒಬ್ಬ ಸಂಸ್ಥಾನಿಕನಿದ್ದಾನೆ; ಇವನು ಈ ಹಳ್ಳಿಗಳಲ್ಲಿ ಆಸ್ತಿಗಳ ಕೃಷಿಕಾರ್ಯವು ಸರಾಗ ನಡಿಯುತ್ತದೋ ಎಂದು ನೋಡಬೇಕು.

ಇನ್ನೊಂದು ಸೌಕರ್ಯವು ಜರ್ಮನಿಯಲ್ಲಿದೆ. ದವಸಧಾನ್ಯಗಳ ಬೆಲೆ ಕಂಡಾಬಟ್ಟೆ ಏರುತಗ್ಗಾಗಿ ರೈತರಿಗೆ ಪೆಟ್ಟು ತಗಲದಂತೆ ಕೃಷಿ ಇಲಾಖೆಯವರೇ ಬೆಲೆಗಳನ್ನು ನಿಶ್ಚರ್ಷಿಸಿ, ಪೈರು ಬೇಕಾದಲ್ಲಿಗೆ ರಫ್ತಾಗುವುದಕ್ಕೂ ಬೆಲೆಯನ್ನು ಆಧರಿಸಿ ಪೈದಾಸ್ತನ್ನು ಮಾಡಲಿಕ್ಕೂ ಅವರೇ ಜವಾಬ್ದಾರರು. ಇದರ ವೈವಾಟಿನಲ್ಲಿ ತನ್ನ ಮನಸ್ಸಿಗೆ ತೋರಿದ ಕೆಲವು ಸಂದೇಹಗಳ ನಿವೃತ್ತಿ, ಇನ್ನೊಂದು ಸಲ ಜರ್ಮನಿಗೆ ಹೋದಾಗ ಮಾಡಲಿರುವೆನೆಂದು ಶ್ರೀಯುತರು ಅಂದಿದ್ದಾರೆ. ಆದರೆ ಜನರ ಆರೋಗ್ಯವೂ ದುಡಿತದ ಮಿತಿಯೂ ಹೆಚ್ಚುವಂತೆ ಹಿಟ್ಲರರೂ ಮುಸೊಲಿನಿಯೂ ಮಾಡಿದ ಯತ್ನಗಳು ಶ್ಲಾಘ್ಯವಾಗಿವೆ ಎಂದು ಅವರ ಅಭಿಮತ.

ಈ ಏರ್ಪಾಡಿಗೆ ಉಪಯುಕ್ತವಾಗುವಂತೆ 'ಲೇಬರ್ ಸರ್ವಿಸ್ ಕೆಂಪ್' ಎಂಬ ಹೆಸರಿನಿಂದ ೧,೪೦೦ ಸಂಸ್ಥೆಗಳಿವೆಯಂತೆ. ಒಂದೊಂದು ಸಂಸ್ಥೆಯಲ್ಲಿ ೧೫೦ ರಿಂದ ೨೦೦ರ ವರೆಗೆ ತರುಣರಿದ್ದಾರೆ. ಯಾವ ಮನೆತನದವನೇ ಆಗಲಿ, ೨೦ ವರ್ಷ ಪ್ರಾಯವಾದೊಡನೆ ಆತನು ಈ 'ಕೇಂಪಿ'ನಲ್ಲಿ ೬ ತಿಂಗಳ ಕಾಲ ಇರಲೇ ಬೇಕು; ಅನಂತರ ಒಂದು ವರ್ಷ ಸೈನ್ಯದಲ್ಲಿ ತರಬೇತಿ ಹೊಂದಬೇಕು. ಈ 'ಕೇಂಪು'ಗಳಲ್ಲಿ ಬಂದು ತಂಗುವುದು ಆಯಾ ಜನರ ಸ್ವೇಚ್ಛೆಯ ಮೇಲೆ ಹೊಂದಿದೆ ಎಂದು ಪ್ರಕಟಿಸಿದರೂ ನಿಜವಾಗಿಯೂ ಇದು ಕಡ್ತಾಯದ ಕಾರ್ಯ.

ಇಲ್ಲಿ ಇವರು ಸೂರ್ಯೋದಯಕ್ಕೆ ಮುಂಚಿತವಾಗಿ ಎದ್ದು ಗೈಮೆಯ ಕೆಲಸಕ್ಕೆ ಕೈಹಚ್ಚಬೇಕು. ಇವರಲ್ಲಿ ಶ್ರೀಮಂತ ಬಡವ ಎಂಬ ಭೇದವಿಲ್ಲದೆ ಎಲ್ಲರೂ ಕೈಕೆಲಸಮಾಡಬೇಕು. ಜರ್ಮನರು ಈ ಶಿಸ್ತನ್ನು ಸಂತೋಷದಿಂದ [illegible] ರಿಸಿ ಭ್ರಾತೃಭಾವದಿಂದಲೇ ವರ್ತಿಸುತ್ತಾರೆ. ನೆಲವನ್ನು ಅಗೆಯುವುದು, ಜವುಗನ್ನು ಮಣ್ಣಿನಿಂದ ಮುಚ್ಚುವುದು, ಕಾಡುಗಳನ್ನು ಕಡಿಯುವುದು 'ನೋರ್ತ್ ಸೀ' ಎಂಬ ಸಮುದ್ರಕರಾವಳಿಯನ್ನು ವಿಸ್ತರಿಸಿ ಆಗಮೆಗೆ ತರುವುದು ಇತ್ಯಾದಿ ಕಾರ್ಯಗಳು ಈ 'ಕೇಂಪು'ಗಳಲ್ಲಿ ಜರಗುತ್ತವೆ. ಜರ್ಮನಿಯಲ್ಲಿ ಸುಮಾರು ೧೦ ಮಿಲ್ಲಿಯ ಎಕ್ರೆ ಜವುಗು ಸ್ಥಳ, ೧೮ ಮಿಲ್ಲಿಯ ಎಕ್ರೆ ಬಂಜರು ಸ್ಥಳ ಇರುವುದರಿಂದ ಈ ಆಗಮೆಯ ಕಾರ್ಯಕ್ಕೆ ತುಂಬಾ ಅವಕಾಶವಿದೆ. ಇಲ್ಲಿ ಸರಕಾರಿ ಸ್ಥಳವನ್ನು ನಿರ್ಗತಿಕರಿಗೆ ಕೊಡುವ ಉದಾರ ಮನಸ್ಸು ಮಾಡಿದರೂ ಅದನ್ನು ರೂಪಿತಕ್ಕೆ ತರುವ ಸೌಕರ್ಯವು ಸರಕಾರದಿಂದ ಕೊಡಲ್ಪಡುವುದಿಲ್ಲವಾದ್ದರಿಂದ ಸ್ಥಳವೆಲ್ಲ ಬಂಜರಾಗಿಯೇ ಉಳಿದಿದೆ. ಈ ವಿಚಾರವು ಇನ್ನೂ ಸರಕಾರದ ತಿಳುವಳಿಕೆಗೆ ಬರಲಿಲ್ಲ.

ಮಧ್ಯಾಹ್ನ ಈ 'ಕೇಂಪು'ಗಳಲ್ಲಿ ಈಗಿನ ಸಮತಾವಾದದ ಸಮಸ್ಯೆಗಳು, ಜರ್ಮನ್ ಇತಿಹಾಸ, ಪ್ರಸ್ತುತ ರಾಜಕೀಯ ವಿಚಾರಗಳು ಇವುಗಳ ವಿಷಯದಲ್ಲಿ ಈ ಯುವಕರಿಗೆ ಬೋಧನೆ ಸಿಗುತ್ತದೆ. ವಾರ್ಸೆಲದ ಒಪ್ಪಂದವು ಹೇಗೆ ಜರ್ಮನಿಯ ಗೌರವಕ್ಕೂ ಸ್ವಾತಂತ್ರ್ಯಕ್ಕೂ ಬಾಧಕಕರ, ಜರ್ಮನಿಯು ಯಾವ ವಸಾಹತುಗಳು ಅದರ ಕೈತಪ್ಪಿಹೋದುದರಿಂದ ಕೈಗಿಡ್ತವಾಗಿ ಹೋಯಿತು, ಈ ಮೊದಲು ಜರ್ಮನಿಯ ಏಕಛತ್ರದೊಳಗೆ ಸೇರಿಕೊಂಡಿದ್ದ ಯಾವ ಪ್ರದೇಶಗಳು ಈಗ ಫ್ರಾನ್ಸ್, ಬೆಲ್ಜಿಯಮ್, ಡೆನ್ಮಾರ್ಕ್, ಪೋಲೆಂಡ್, ಲಿಥುವೇನಿಯಾ, ಜೆಕ್ಕೊಸ್ಲೊವಾಕಿಯದ ಮರೆ ಸೇರಿವೆ, ಇತ್ಯಾದಿ ವಿಷಯಗಳನ್ನು ಪಠಗಳ ಮೂಲಕ ವಿವರಿಸುತ್ತಾರೆ. ಇದಲ್ಲದೆ ತನ್ನ ದೇಶದ ಒಳಿತಕ್ಕಾಗಿ ತನು-ಮನ-ಧನಗಳನ್ನು ಅರ್ಪಿಸುವುದು ಪ್ರತಿಯೊಬ್ಬ ಜರ್ಮನನ ಕರ್ತವ್ಯವೆಂಬುದನ್ನು ಮುಂದಟ್ಟುವಾಡಿಸುತ್ತಾರೆ. ಈ ಬಗೆಯ ಶಿಕ್ಷಣವನ್ನು ನಮ್ಮ ಯುವಕರಿಗೂ ಕೊಟ್ಟರೆ ಆಗದೆ ಎಂದು ನಿನ್ನ ಬಾಯಿಯಿಂದ ನೀವು ಒಸರುತ್ತಿದೆ—ಎಂಬುದಾಗಿ ಶ್ರೀ. ವಿಜಯರಾಘವಾಚಾರ್ಯರು ಉದ್ಗಾರಗಳನ್ನು ಹೊರಡಿಸಿದ್ದಾರೆ.

The Pioneer General Insurance Agency of West Coast, Mangalore, S. K.

Invites application for the post of a cashier—salary Rs. 20/— per month, annual increment Rs. 5/—, to join service immediately. None but those who can afford to pay cash security of Rs. 500/— need apply.

Knowledge of Typing will be taken as a special qualification.

Application for agencies from ladies and gents on lucrative terms are also invited.

ಕಾಮತ್‌ರವರ ದಿವ್ಯ ಸಿದ್ಧೌಷಧ!

ಉನ್ಮಾದ ಸಂಜೀವನ!!

ಉಗ್ರವಾಗಿರುವ ಹುಚ್ಚು; ನೌನವಾಗಿರುವ ಹುಚ್ಚು; ದೀರ್ಘ ಕಾಲದ ಹುಚ್ಚು; ಅಲ್ಪ ಕಾಲದ ಹುಚ್ಚು ನಿದ್ರಾ ನಾಶ, ಮನೋವಿಕಾರ, ಅಪಸ್ಮಾರ, ಹೆಂಗಸರಿಗುಂಟಾಗುವ ಸೂತಿಕಾವಾಯು, ಹಿಸ್ಟೇರಿಯಾ—ಎಂತಹ ಹುಚ್ಚು, ಬುದ್ಧಿಭ್ರಮಣೆಗಳಿಗೂ ಅವಶ್ಯ ಉಪಯೋಗಿಸಿ.

ಇದರಲ್ಲಿ ಅಮಲುಪದಾರ್ಥಗಳಿಲ್ಲ; ಶುದ್ಧ ವನಸ್ಪತಿಗಳದ್ವೇ ತಯಾರಿ.

60 ಮಾತ್ರೆಗಳ ಬಾಟಲಿಯೊಂದಕ್ಕೆ ಬೆಲೆ ರೂ. 3/— ಮಾತ್ರ.

ವಿ. ಪಿ. ಚಾರ್ಜು ಪ್ರತ್ಯೇಕ.

ವಿಳಾಸ:—ಸಿ. ವೈಕುಂಠ ಕಾಮತ್,
'ಇನ್‌ಸೇನಿಟಿ ಎಕ್ಸ್‌ಪರ್ಟ್',
ಪೋಸ್ಟ್ ಉಡುಪಿ, ಜಿ. ಕನ್ನಡ.

ನಡೆಲ್‌ನಿಂದ ಕರ್ನಾಟಕಸಂಗೀತಕ್ಕೆ ಅನುಕೂಲವೆ? ಅನನುಕೂಲವೆ?

(ಮುಂದುವರಿಸಿದುದು)

ವೀಣಾವಾದ್ಯ:—ಈ ವಾದ್ಯವು ಬಹಳ ತನವಾಗಿ ಬಾರಿಸಲ್ಪಡುವ ವಾದ್ಯ; ಇದರ ತೆಯಲ್ಲಿ ಅನುಕರಿಸಬೇಕಾದರೆ ಪಿಟೀಲು ರಿಸುವವರು ಬಹಳ ಶುದ್ಧವಾದ ಸ್ವರಸ್ಥಾನ ಲ್ಲಿ ಕೈಯಿಟ್ಟುಕೊಂಡು ಬಾರಿಸಬೇಕು. ವೀ ವಾದ್ಯದಲ್ಲಿ ಗಮಕಗಳನ್ನೂ (ಜಾರು ಎಳೆ ಳು) ಬಹಳ ನಿಧಾನವಾಗಿ ಬಾರಿಸಬಹುದು. ನನ್ನು ಪಿಟೀಲಿನಲ್ಲಿ ಬಾರಿಸುವುದು ಬಹಳ ಷ್ಟ. ಈ ವಾದ್ಯದಲ್ಲಿ ಒಂದು ಸ್ಥಾಯಿಯಲ್ಲಿ ನಗಳು ಸುಮಾರು ೧ ಅಥವಾ ೨ ಅಡಿಗಳ್ಳಿ ಅಡಗಿದ್ದರೆ ಪಿಟೀಲಿನಲ್ಲಿ ಹಾಗಿಲ್ಲದೆ ಬರಿಯ ರ್ಧ ಅಡಿಯೊಳಗೇನೇ ಒಂದು ಸ್ಥಾಯಿಯಲ್ಲಿ ನಗಳು ಅಡಗಿವೆ. ಹೋಗಲಿ ಎಂದರೆ ಪಿಟೀ ನ್ನು ಬಾರಿಸಬೇಕಾದರೆ ಕಮಾನಿನ ಸಹಾಯ ಂದ ಬಾರಿಸಬೇಕು. (ಸ್ವಲ್ಪ ಶ್ರಮ ಜಾಸ್ತಿ) ೀಣೆಗೆ ಹಾಗಲ್ಲ ಬರಿಯ ಕೈಯ ಉಗುರಿನಿಂ ಲೇ ಬಾರಿಸಬಹುದು. ವೀಣೆಗೆ ತಾಳ ಆ ರ್ತಜ್ಞಾನದ ಸೌಕರ್ಯವೂ ಇದೆ. ಇದಕ್ಕೆ ಾಗಿಲ್ಲ.

ಗೋಟುವಾದ್ಯ:—ಇದನ್ನೂ ಅನುಕರಿಸಲು ೂಡ ಕೆಲವೆಡೆಗಳಲ್ಲಿ ಉಪಯೋಗಿಸಿದ್ದಾರೆ. ಇದು ಈಗ ಜಾಸ್ತಿ ಪ್ರಚಾರವಿಲ್ಲದ ವಾದ್ಯ ಾದ್ದರಿಂದ ಪಿಟೀಲನ್ನು ಜಾಸ್ತಿಯಾಗಿ ಉಪ ಯೋಗಿಸುತ್ತಿಲ್ಲ. ಇದು ಶುದ್ಧ ಗಮಕ ವಾದ್ಯ ೂ ವೀಣೆಗಿಂತ ಬಹಳ ನಿಧಾನವಾಗಿ ಬಾರಿ ಸುವ ವಾದ್ಯವೂ ಆಗಿದೆ.

ಅಲ್ಲದೆ ಈ ಪಿಟೀಲು ವಾದ್ಯವನ್ನು ಹರಿ ಕಥೆಗಳಿಗೂ ಉಪಯೋಗಿಸುತ್ತಾರೆ. ಅಲ್ಲಿ ಇವ ುಗೆ ತಿಳಿಯದ ಮಟ್ಟುಗಳೂ ಹಿಂದುಸ್ಥಾನಿಗಳೂ ಬರುತ್ತವೆ. ಅವುಗಳನ್ನು ಅನುಕರಿಸಿಯೇ ತೀರ ಬೇಕು. ಕೆಲವು ಹರಿಕಥಾವಿದ್ವಾಂಸರುಗಳು ಅವುಗಳಿಗೆ ಕೂಡ ಸ್ವರವಿನ್ಯಾಸ ಸಾಹಿತ್ಯವಿ ನ್ಯಾಸ ಕೂಡ ಮಾಡುತ್ತಾರೆ. ಇಲ್ಲಿ ಬಾಯಿ ಹಾಡುಗಾರಿಕೆಯ ವಿದ್ವಾಂಸರುಗಳ ಜೊತೆಯಲ್ಲಿ ಉಂಟಾಗುವ ಶ್ರಮವಾಗುತ್ತೆ. ಹಿಂದಿನ ಕಾಲ ದಲ್ಲಿ ಸಂಗೀತವಿದ್ವಾಂಸರುಗಳ ಜೊತೆಯಲ್ಲಿ ಯೇ ಅಥವಾ ಹರಿಕಥಾ ಭಾಗವತರ ಜೊತೆ ಯಲ್ಲಿ ಪಿಟೀಲಿನವರು ಕೂತುಕೊಳ್ಳದೆ ನಿಂತು ಕೊಂಡು ಕೂಡ ಬಾರಿಸುವ ವಾಡಿಕೆ ಇತ್ತು. ಅದು ಕೂಡ ಈಗ ಹೋಗಿ ಪಕ್ಕದಲ್ಲಿ ಕೂತುಕೊ ಳ್ಳುವ ಸ್ವಾತಂತ್ರ್ಯವು ಬಂದಿತು. ಎಷ್ಟಾದರೇನು? ಈಗಲೂ ಕೂಡ ನಾಟ್ಯಗಳಲ್ಲಿ ಪಿಟೀಲು ಬಾರಿ ಸುವವರು ಹಿಂದೆ ನಿಂತುಕೊಂಡೇ ಬಾರಿಸುತ್ತಿದ್ದಾರೆ.

ಸಾಮಾನ್ಯವಾಗಿ ಹಿಂದಿನ ಕಾಲದ ಕೀರ್ತ ನೆಗಳನ್ನು ಮತ್ತು ಪದಗಳನ್ನು ಹಾಡುವುದೇ ಕಷ್ಟ. ಅಂತಹವುಗಳನ್ನು (ಪದಗಳು) ಭರತ ನಾಟ್ಯಗಳಲ್ಲಿ ಉಪಯೋಗಿಸುತ್ತಾರೆ.

ಸಾಮಾನ್ಯವಾಗಿ ಕೆಲವು ಲಕ್ಷ್ಯ ರಾಗ ಗಳಲ್ಲಿ ಸ್ವರ ಹಾಡುವುದೇ ಆಗಲಿ ಸಾಹಿತ್ಯ ವಿನ್ಯಾಸ ಮಾಡುವುದೇ ಆಗಲಿ ಬಹಳ ಕಷ್ಟ. ಅಂತಹ ರಾಗಗಳು ಈ ವೆಂಕಟಮುಖಿಗಳು ಕಂಡುಹಿಡಿದಿರುವ ೧೨ ಸ್ಥಾನಗಳಲ್ಲದೆ ಬೇರೆಯ ಶ್ರುತ್ಯಂತರ ಸ್ಥಾನಗಳಲ್ಲಿ ಬರುವುದರಿಂದ ಬರಿ ಅರ್ಧ ಅಡಿಯು ಸ್ಥಾಯಿಯ ಸ್ಥಾನಗಳಲ್ಲಿ ಬಾರಿ ಸುವುದು ಹೇಗೆ? ಪೂರ್ತಿ ರಾಗಭಾವವು ಬರು ತ್ತದೆಯೇ? ಇಲ್ಲವಲ್ಲ.

ಉದಾಹರಣೆಗೆ—ಶಹನಾ ಕಾನಡ ರೀತಿ ಗೌಳ ಆಹಿರಿ ಮೊದಲಾದ ರಾಗಗಳಲ್ಲಿ ಪಲ್ಲವಿ ಗಳನ್ನು ಹಾಡುವುದೇ ಕಷ್ಟ, ಬಾರಿಸಬೇಕೆಂದರೆ ಎಷ್ಟು ಕಷ್ಟ? ಅದೂ ಅಲ್ಲದೆ ಹಾಡಿದುದನ್ನು ಅನುಕರಿಸಬೇಕಾದರೆ ಇನ್ನೆಷ್ಟು ಕಷ್ಟ?

ಮೇಲೆ ಹೇಳಿದ ರೀತಿಯಲ್ಲೇ ನಾಟಕ ಗಳಿಗೂ ಉಪಯೋಗಿಸುತ್ತಾರೆ. ಅಲ್ಲಿ ಇನ್ನೊಂ ದು ದೊಡ್ಡ ಕಷ್ಟ,—ಸಾಮಾನ್ಯ ನಾಟಕಗಳಲ್ಲಿ ೨೦-೩೦ ಜನರ ಹಾಡುಗಾರಿಕೆಗೂ ತಕ್ಕ ಹಾಗೂ ಅವರ ಹೆಚ್ಚು-ಕಮ್ಮಿ ಶ್ರುತಿಗಳಿಗೆ ತಕ್ಕ ಹಾಗೂ ಅಲ್ಲದೆ ಆ ೨೦-೩೦ ಜನಗಳ ಹಾಡುಗಾರಿಕೆಯ ಎಲ್ಲಾ ಭಾಗವನ್ನೂ ರಾತ್ರಿ ೯ ಅಥವಾ ೧೦ ಗಂಟೆಯಿಂದ ಹಿಡಿದು ಬೆಳಿಗಿನ ಝಾವ ೪ ಗಂಟೆಯ ವರೆಗೂ ಅನುಕರಿಸುತ್ತ ಕೂತಿರಬೇಕು. ಹೋಗಲಿ ಎಂದರೆ ಅಲ್ಲಿ ನಾಟಕವಾಡುವ ಪಾತ್ರ ತ್ರಗಳಿಗೆ ಒಳ್ಳೆಯ ಹೆಸರೇ ಹೊರತು ಪಿಟೀಲಿನವ ರಿಗೇನೂ ಒಳ್ಳೆಯ ಹೆಸರಿಲ್ಲ. ಈಗ ಮೇಲೆ ಹೇ ಳಿದ ಒಂದು ಕಛೇರಿಯಲ್ಲೂ ಪಿಟೀಲಿನವರು ಮುಖ್ಯ ಪಾತ್ರವನ್ನು ವಹಿಸುವ ಹಾಗೂ ಇಲ್ಲ. ಒಳ್ಳೆಯ ಹೆಸರೂ ಇಲ್ಲ. ದುಡ್ಡಿನ ಮರ್ಯಾ ದೆಯೂ ಇಲ್ಲ. ಕಷ್ಟ ತಪ್ಪುವ ಹಾಗೂ ಇಲ್ಲ. ಇಂತಹ ವಾದ್ಯವನ್ನು ಜನಗಳು ವೃಥಾ ಹಿಡಿದು ನೋಸಹೋಗಕೂಡದೆಂಬದಾಗಿ ನನ್ನ ಕೋ ರಿಕೆ. ಪಿಟೀಲುವಾದ್ಯವನ್ನು ಮಾತ್ರ ಕಛೇರಿ ಮಾಡಲಿಟ್ಟುಕೊಂಡರೆ ಜನಗಳು 'ಬರಿಯ ಪಿ ಟೀಲಿನಿಂದೇನು ಪ್ರಯೋಜನ? ಬಾಯಿ ಹಾಡು ಗಾರಿಕೆಯು ಬೇಕ'ನ್ನುತ್ತಾರೆ. ಇಲ್ಲದಿದ್ದರೆ ಆವರಿಗೆ ಸಾಹಿತ್ಯ ಗೊತ್ತಾಗುವುದಿಲ್ಲ ಮತ್ತು ಹಾಡಿದಷ್ಟು ತೃಪ್ತಿಯಾಗುವುದಿಲ್ಲ. ಒಟ್ಟಿನಲ್ಲಿ ಪಿಟೀಲನ್ನು ಅಭ್ಯಾಸ ಮಾಡಲು ಶ್ರಮ ಜಾಸ್ತಿ, ಪ್ರಯೋಜನ ಕಡಿಮೆ ಆದ್ದರಿಂದ ಇದನ್ನು ಸಂಗೀ ತ ಕಛೇರಿಗಳಿಗೆ ಉಪಯೋಗಿಸಿಕೊಳ್ಳುವುದಕ್ಕಿಂತ ಅದನ್ನೇ ಒಂದು ಸ್ವತಂತ್ರ ವಾದ್ಯವನ್ನಾಗಿ ಮಾ ಡಿದರೆ ಬಹಳ ಸಹಾಯ ಮಾಡಿದ ಹಾಗಾಗು ತ್ತದೆ. ಇದನ್ನು ಮದ್ರಾಸ್ ಕಾನ್‌ಫರೆನ್ಸ್‌ಲ್ಲಿ ಚರ್ಚಿಸುತ್ತಾರೆಯೇ?

ಬಾಯಿಹಾಡುಗಾರಿಕೆ;—ಪಿಟೀಲು

೧. ಕೀರ್ತನೆಯನ್ನು ಭಾವವಾಗಿ ಹಾಡ ಬಹುದು.—ಪಿಟೀಲಿನಲ್ಲಿ ಕಷ್ಟ.

೨. ರಾಗವನ್ನು ಭಾವವಾಗಿ ಹಾಡಬಹು ದು. (ಲಕ್ಷ್ಯ ರಾಗಗಳನ್ನು)-ಪಿಟೀಲಿನಲ್ಲಿ ಕಷ್ಟ.

೩. ಯಾವಾಗಲೂ ಅಭ್ಯಾಸಮಾಡುತ್ತಿರ ಬೇಕಾದ ಆವಶ್ಯಕವಿಲ್ಲ.—ನಿತ್ಯವೂ ಪ್ರತಿ ಕ್ಷಣ ದಲ್ಲಿಯೂ ಅಭ್ಯಾಸಮಾಡುತ್ತಿರಬೇಕು.

೪. ಶಾರೀರವು ನುಡಿಯುವಷ್ಟು ಚುರುಕಿ ನವರಿಗೆ ಅಭ್ಯಾಸಮಾಡಿದರೆ ಸಾಕು.—ಎಲ್ಲಾ ವಿಧವಾದ ಉಚ್ಚಾರಗಳನ್ನೂ ಚುರುಕಾಗಿ ನಿಧಾನ ಆದಷ್ಟು ಮಾಡಿಯೇ ತೀರಬೇಕು.

೫. ಶಾರೀರಕ್ಕೆ ತಕ್ಕ ಶ್ರುತಿಯನ್ನಿಟ್ಟುಕೊ ಳ್ಳಬಹುದು (ಹೆಚ್ಚು-ಕಡಮೆ).—ಎಲ್ಲಾ ಶ್ರುತಿ ಗಳಲ್ಲಿಯೂ ಅಭ್ಯಾಸವಿರಬೇಕು. (ಹೆಚ್ಚು-ಕ ಡಿಮೆ.)

೬. ಶಾರೀರದ ಗಾತ್ರಕ್ಕೆ ತಕ್ಕ ಹಾಗೆ ಶ್ರುತಿಯನ್ನಿಟ್ಟುಕೊಳ್ಳಬಹುದು.— ಶಾರೀರವನ್ನ ನುಸರಿಸಿ ದಪ್ಪ-ಸಣ್ಣ ತಂತಿಗಳನ್ನುಪಯೋಗಿಸಿ ಅಭ್ಯಾಸಮಾಡಬೇಕು.

೭. ಎಲ್ಲಾ ನುಡಿಕಾರಗಳೂ ಗಮಕಶುದ್ಧ ವಾಗಿವೆ.—ಗಮಕಶುದ್ಧವಿಲ್ಲ.

೮. ಮನಸ್ಸಿಗೆ ಬಂದ ಸ್ಥಾನಗಳಲ್ಲಿ ನಿಂತು ಕೆಲಸ ಮಾಡಬಹುದು.—ಸಾಧ್ಯವಿಲ್ಲ.

೯. ತನಗೆ ಮನಸ್ಸು ಬಂದ ಸ್ಥಳದಲ್ಲಿ ಸ್ವರವಿನ್ಯಾಸವನ್ನೋ ಅಥವಾ ಸಾಹಿತ್ಯವಿನ್ಯಾ ಸವನ್ನೋ ಮಾಡಬಹುದು.—ಹಾಗಿಲ್ಲ. ಹಾಡು ವವರನ್ನು ಅನುಸರಿಸಿಯೇ ತೀರಬೇಕು.

೧೦. ಹಾಡುವವರ ಶಕ್ತಿಗೆ ತಕ್ಕ ಹಾಗೆ ಪ್ರೋಗ್ರಾಂ ಇಟ್ಟುಕೊಳ್ಳಬಹುದು.—ಅನುಸರಿ ಸಿಯೇ ತೀರಬೇಕು. ತಮ್ಮ ಶಕ್ತಿಯನ್ನು ತೋರಿ ಸುವ ಹಾಗಿಲ್ಲ.

೧೧. ಹಾಡುವವರಿಗೆ ಮರ್ಯಾದೆ ಜಾಸ್ತಿ (ದುಡ್ಡಿನ ರೂಪವಾಗಿಯೂ), (ಗೌರವಪದರೂಪ ವಾಗಿಯೂ).—ಮರ್ಯಾದೆ ಕಡಿಮೆ.

೧೨. ಇದರಲ್ಲಿ ಸ್ವಾಭಾವಿಕವಾಗಿ ಹಾಡಬ ಬಹುದು.—ಕೃತಕ.

೧೩. ಅಂಗಗಳು ವಾದ್ಯಕ್ಕಿಂತ ಸ್ವಾಧೀನ ಜಾಸ್ತಿ.—ಅಂಗಗಳು ಸ್ವಾಧೀನ ಕಡಿಮೆ.

೧೪. ತಾಳಹಾಕಲು ಅನುಕೂಲವಿದೆ ಆ ವರ್ತಜ್ಞಾನಕ್ಕೆ ಶ್ರಮವಿಲ್ಲ —ತಾಳ ಕಷ್ಟ. ಆ ವರ್ತಜ್ಞಾನವಂತೂ ಹೇಳುವದಕ್ಕೆ ಕಷ್ಟ. ಇತ ರರು ತಾಳಹಾಕುವಾಗ ಆವರ್ತವನ್ನು ನೋಡಿ ಕೊಂಡೇ ತೀರಬೇಕು.

೧೫. ಯಾವಾಗಲೂ ವಾದ್ಯಗಾರರನ್ನು ಕಂ ಡರೆ ಉದಾಸೀನ ಕೂಡ ಇರಬಹುದು. ಇಲ್ಲ

(ಎನೇ ಪುಟಕ್ಕೆ ಮುಂದುವರಿಸಿದೆ)

WANTED

Sub-agents under our Special Agency for West Coast to represent our Ashok Insurance Co., Ltd., Bombay. Persons with knowledge of Insurance business preferred. Good remuneration.

Apply:- Messrs. WELDON & CO., Karanje Building, Hampankatta, MANGALORE.

SOLE AGENTS

for Super Re-built Tyres, otomatic puncture proof. Taterene that saves Motorists millions, FIT Boot and Shoe Sole and Heel stripes of patent rubber protectors.

FOR SALE

Some bank and other Shares, Pianos, Radio-Set, Remington No. 10 Stnd. visible, Cane chairs, German Walking Sticks, House and Garden and Landed properties for sale and on Mortgage.

For particulars apply sharp to our above address and be satisfied.

The Premier Bank of India, Ltd.,

ದಿ ಪ್ರಿಮಿಯರ್ ಬೇಂಕ್ ಒಫ್ ಇಂಡಿಯಾ, ಲಿಮಿಟೆಡ್,

ಹೆಡ್ ಆಫೀಸ್—ಮದ್ರಾಸ್.

ಚಾಲ್ತಿ ಲೆಕ್ಕಾಚಾರ, ಸೇವಿಂಗ್ಸ್ ಬ್ಯಾಂಕ್ ಮತ್ತೂ ಪ್ರಾವಿಡೆಂಟ್ ಠೇವಣಾತಿ ಲೆಕ್ಕಾಚಾರಗಳನ್ನು ತೆರೆಯಲಾಗುತ್ತದೆ. ಒಂದು ವರ್ಷ, ಹಾಗೂ ಎರಡು ವರ್ಷಗಳ ಕಾಲಾವಧಿಯ ನಿರಖು ಠೇವಣಾತಿಗಳನ್ನು ಅನುಕೂಲವಾದ ಬಡ್ಡಿ ದರಗಳೊಡನೆ ಸ್ವೀಕರಿಸಲಾಗುತ್ತದೆ. ಸಾಲಗಳನ್ನು ಯೋಗ್ಯವಾದ ಭದ್ರತೆ ಗಳ ಮೇಲೆ ಕೊಡಲಾಗುವುದಲ್ಲದೆ, ಎಲ್ಲ ಬಗೆಯ ಬ್ಯಾಂಕಿಂಗ್ ವ್ಯವಹಾರಗ ಳನ್ನೂ ಕೈಕೊಳ್ಳಲಾಗುತ್ತಿವೆ. ಹೆಚ್ಚಿನ ವಿವರಗಳ ಬಗ್ಗೆ ಹೆಡ್ ಆಫೀಸಿಗೆ ಬರೆದು ಕೇಳಿ.

ಎಸ್. ವಿ. ರಾವ್, ಡಿ. ಕೋವ್.,
ಮ್ಯಾನೇಜಿಂಗ್ ಡೈರೆಕ್ಟರ್.

ಅತ್ಯುತ್ಕೃಷ್ಟ ತರಗತಿಯ

ಹೊಮಿಯೊಪ್ಪತಿಕ್ ಮತ್ತು ಬಾಯೊಕೆಮಿಕ್ ಔಷಧಗಳಿಗಾಗಿ

ಇವರಿಗೆ ಬರೆಯಿರಿ—

INDIAN HOMOEOPATHIC STORES,

10/11 Upper Circular Road, :: CALCUTTA.

ಕೆಟಲಾಗು ಇತ್ಯಾದಿ ಅಪೇಕ್ಷಿಸಿದಲ್ಲಿ ಕಳುಹಲಾಗುವದು.

8, 19—6.

THE Bombay Life Assurance Co., Ltd.,

ESTD. 1908.

FIGURES THAT TELL

Year.	Proposed Business.	Completed Business.
1931	Rs. 72,91,300	Rs. 58,66,300.
1932	Rs. 75,69,500	Rs. 63,54,500.
1933	Rs. 1,11,47,833	Rs. 94,16,500.
1934	Rs. 1,25,50,250	Rs. 1,04,33,750.
1935	Rs. 1,50,48,915	Rs. 1,23,28,665.

Please consult for Agencies and Life Insurance Advice:—

Messrs. KOCHIKAR BROTHERS, Branch Secretaries.

OFFICES:

Visveswarapuram Circle, BANGALORE CITY.
Soumyalayam, CALICUT.
Udipi, S.INDIA.
Mount Road, MADRAS.
"Gautam Nivas", Charni Road Girgaum, BOMBAY, No. 4.
Car-Street, MANGALORE.

(೩ನೇ ಪುಟದಿಂದ)

ವಿದ್ದರೆ ಗೌರವವಿಲ್ಲದೆಯೂ ಇರಬಹುದು.—ಹಾಗಿರಲು ಸಾಧ್ಯವಿಲ್ಲ.

ವೀಣೆ—ಪಿಟೀಲು

೧. ಬಹಳ ನಿಧಾನವಾಗಿ ಬಾರಿಸಲ್ಪಡುವ ವಾದ್ಯ.—ನಿಧಾನವಾಗಿ ಬಾರಿಸಲು ಕಷ್ಟ.

೨. ರಾಗಭಾವವನ್ನು ಸುಮಾರಾಗಿ ಪೂರ್ತಿಯಾಗಿ ಬಾರಿಸಬಹುದು.—ಅಷ್ಟು ಸುಮಾರಾಗಿ ಪೂರ್ತಿಯಾಗಿ ಬಾರಿಸಲು ಸಾಧ್ಯವಿಲ್ಲ.

೩. ಯಾವ ಸ್ಥಾನದಲ್ಲಿ ಬೇಕಾದರೂ ಕೆಲಸ ಮಾಡಬಹುದು.—ಸಾಧ್ಯವಿಲ್ಲ.

೪. ಆವರ್ತಜ್ಞಾನಕ್ಕೂ ತಾಳಕ್ಕೂ ಅನುಕೂಲಗಳಿವೆ.—ಇಲ್ಲ.

೫. ಸ್ವರಸ್ಥಾನಗಳಿವೆ.—ಇಲ್ಲ.

೬. ತಂತಿಗಳು ಸಣ್ಣ.—ಇಲ್ಲ.

೭. ಸ್ಥಾಯಿಯ ಸ್ಥಾನಗಳು ದೂರವಾಗಿವೆ.—ಇಲ್ಲ.

೮. ಎರಡು ಕೈಗಳೂ ಸ್ವಾಧೀನದಲ್ಲಿವೆ.—ಒಂದು ಕೈ ಮಾತ್ರ ಸ್ವಾಧೀನದಲ್ಲಿದೆ. (ಎಡಗೈ).

೯. ಈ ವಾದ್ಯದವರು ತನಗೆ ಬೇಕಾದ ಪ್ರೋಗ್ರಾಂ ಇಟ್ಟುಕೊಳ್ಳಬಹುದು.—ಅನುಕರಿಯೇ ತಿರಬೇಕು.

೧೦. ತಮ್ಮ ಮನಸ್ಸಿಗೆ ಬಂದ ಸ್ಥಳದಲ್ಲಿ ಸ್ವರವಿನ್ಯಾಸ, ಸಾಹಿತ್ಯವಿನ್ಯಾಸ ಮಾಡಬಹುದು.—ಹಾಗಿಲ್ಲ.

೧೧. ಶ್ರುತಿ ಮನಸ್ಸಿಗೆ ಬಂದ ಹಾಗೆ ಏರಿಸಬಹುದು—ಹಾಗಿಲ್ಲ.

೧೨. ಇವರಿಗೆ ದುಡ್ಡು, ಮರ್ಯಾದೆ ಎರಡೂ ಜಾಸ್ತಿ.—ಇವರಿಗೆ ಕಡಿಮೆ.

೧೩. ಮಧ್ಯಮ ಕಾಲವನ್ನು ಚೆನ್ನಾಗಿ ಬಾರಿಸಬಹುದು.—ಹಾಗೆ ಬಾರಿಸಲು ಕಷ್ಟ.

೧೪. ಶಬ್ದ ಕಡಮೆ.—ಶಬ್ದ ಜಾಸ್ತಿ.

೧೫. ೫॥ ಅಸ್ಥಾಯಿಯ ವರೆಗೂ ಮೆಟ್ಟಲುಗಳಿವೆ. ಮುಂದೆ ೪ ಅಥವಾ ೪॥ ಸ್ಥಾಯಿಯವರೆಗೂ ಬಾರಿಸಬಹುದು.—೫॥ ಸ್ಥಾಯಿಯವರೆಗೆ ಸ್ಥಾನಗಳಿಲ್ಲದೆ ಬಾರಿಸಬಹುದು. ಮುಂದಕ್ಕೆ ೫ ಅಥವಾ ೪॥ಗೆ ಹೋಗಬೇಕಾದರೆ ಸ್ವರ ಸ್ಥಾನ ನಿಲ್ಲುವುದು ಕಷ್ಟ.

ಕೊಳಲು—ಪಿಟೀಲು

೧. ಇದು ಉಸಿರುವಾದ್ಯ.—ಕೈವಾದ್ಯ.

೨. ಸ್ವತಂತ್ರ ವಾದ್ಯ (ಮೇಲಿನ ಹಾಗೆ).—ಅಲ್ಲ.

೩. ಬಹಳ ಓಟದ ವಾದ್ಯ.—ಅಲ್ಲ.

೪. ಶಬ್ದ ಜಾಸ್ತಿ.—ಕಡಿಮೆ.

೫. ಎರಡು ಕೈಗಳೂ ಸ್ವಾಧೀನ ಉಂಟು.—ಒಂದು ಕೈ ಮಾತ್ರ.

೬. ಸ್ವರಸ್ಥಾನಗಳನ್ನು ಹಿಡಿಯಲು ರಂಧ್ರಗಳಾದರೂ ಇವೆ.—ಯಾವುದೂ ಇಲ್ಲ.

ಗೋಟುವಾದ್ಯ—ಪಿಟೀಲು

೧. ಬಾಯಿಹಾಡುಗಾರಿಕೆಯ ಪೂರ್ತಿ ಯೂದ ಅನುಕರಣ.—ಸಾಧ್ಯವೇ ಇಲ್ಲ.

೨. ಬರೀ ಗಮಕವೇ.—ಇಲ್ಲ.

೩. ವೀಣೆಯ ಹಾಗೆ ಮಿಕ್ಕ ಅನುಕೂಲಗಳಿವೆ.—ಮೇಲೆಯೇ ಹೇಳಿದೆ. (Veen).

೪. ಸ್ವರಸ್ಥಾನಗಳಿಲ್ಲ.—ಇಲ್ಲ.

೫. ಬಲಗೈ ಸ್ವಾಧೀನ ಉಂಟು.—ಎಡಗೈ ಸ್ವಾಧೀನ ಉಂಟು.

೬. ಸ್ವತಂತ್ರ ವಾದ್ಯ.—ಇಲ್ಲ.

ಇದೂ ಅಲ್ಲದೆ ಕೆಲವು ಸಮಯಗಳಲ್ಲಿ ಹಾರ್ಮೋನಿಯಂ ಜೊತೆಯಲ್ಲಿಯೂ ಕೂಡ ಉಪಯೋಗಿಸುವುದುಂಟು.

ಹರಿಕಥೆ—ಪಿಟೀಲು

೧. ಕರ್ನಾಟಕ ಅಥವಾ ಹಿಂದೂಸ್ಥಾನೀ ಸಂಗೀತಮಟ್ಟುಗಳಲ್ಲದೆ ಗ್ರಾಮ್ಯಸಂಗೀತ ಮಟ್ಟುಗಳೂ ಕಡುಕುಗಳೂ ಎಂಬ ಹೆಸರಿನ ಹಾಡುಗಳು ಮುಂತಾಗಿ ಹಾಡುತ್ತಾರೆ.

೨. ನಿಂತುಕೊಂಡು ಹರಿಕಥೆ ಮಾಡುತ್ತಾರೆ.—ಹಾಗೆ ಕಷ್ಟ.

೩. ಅಂತಹ ಶ್ರಮವೇನೂ ಇಲ್ಲ.—ಮಧ್ಯೇ ಮಧ್ಯೇ ನಿಲ್ಲಿಸುವುದರಿಂದ ಶರೀರಶ್ರಮವು ಕೋಗಿ ವಾದ್ಯವು ಸ್ವಾಧೀನದಲ್ಲೇ ಇರುವುದು ಸ್ಪಷ್ಟ. ಚಳಿದೇಶವಾಗಲಿ ಕಾಲವಾಗಲಿ ಆದರಿಂತೂ ಕೇಳುವ ಹಾಗಿಲ್ಲ.

ನಾಟ್ಯ—ಪಿಟೀಲು

ವ್ಯವಹಾರದಲ್ಲಿ ಪಿಟೀಲು ಬಾರಿಸುವವನ ಯೋಗ್ಯತೆ ಕಡಿಮೆ.

೧. ಇದು ಸ್ವತಂತ್ರ.—ಇಲ್ಲ.

೨. ನಾಟ್ಯವಾಡುವಾಗ—ನಿಂತುಕೊಂಡೇ ಬಾರಿಸಬೇಕು.

ನಾಟಕ—ಪಿಟೀಲು.

೧.—ನಾಟಕದಲ್ಲಿರುವವರು ಎಲ್ಲರೂ ಹಾಡುವುದನ್ನು ಇದರಲ್ಲಿ ಪೂರ್ತಿಯಾಗಿ ಅನುಕರಿಸಬೇಕು.

ಅಂತೂ ಮುಖ್ಯವಾಗಿ ಪಿಟೀಲುವಾದ್ಯವನ್ನು ಅಭ್ಯಾಸಮಾಡುವ ಮನುಷ್ಯ ಇಷ್ಟು ದೇಹ ಶ್ರಮವಪಟ್ಟರೂ ಅದಕ್ಕೆ ತಕ್ಕ ಬೆಲೆ ಇಲ್ಲದಿರುವುದನ್ನು ನೋಡಿದರೆ ಆಶ್ಚರ್ಯವಾಗುತ್ತದೆ. ಇನ್ನು ಮುಂದೆಯೂ ಹೀಗೆಯೇ ಈ ವಾದ್ಯವನ್ನು ಈ ರೀತಿಯಾಗಿ ಉಪಯೋಗಿಸಿಕೊಂಡು ಅದಕ್ಕೆ ತಕ್ಕ ಬೆಲೆ ಕೊಡದಿದ್ದರೆ ಸಂಗೀತಪ್ರಪಂಚದಲ್ಲಿ ದೊಡ್ಡ ಅನ್ಯಾಯ ಮಾಡಿದ ಹಾಗಾಗುತ್ತದೆ. ಎಲ್ಲಾ ವಾದ್ಯಗಳಿಗಿಂತಲೂ ಪಿಟೀಲು ಬಹಳ ಶ್ರಮವೂ ಕಾಲವೂ ಬೇಕಾದ ವಾದ್ಯವಾದ್ದರಿಂದ ಇಂತಹ ವಾದ್ಯವನ್ನು ಸಂಗೀತ ಪ್ರಪಂಚಕ್ಕೆ ಉಪಯೋಗಿಸಿದ್ದು ಆಶ್ಚರ್ಯವೇ ಸರಿ. ಈಗ ಎಲ್ಲಾ ವಾದ್ಯಗಳಿಗಿಂತಲೂ ಜಾಸ್ತಿಯಾಗಿ ಬಳಕೆಯಲ್ಲಿರುವ ವಾದ್ಯವೆಂದರೆ ಪಿಟೀಲೇ ಸರಿ. ಈ ವಾದ್ಯವನ್ನು ಉಪಯೋಗಿಸುತ್ತಿರುವುದರಿಂದ ನಮ್ಮ ಸ್ವದೇಶೀ ವಾದ್ಯಗಳೂ ಕೂಡ ಹಿಂದೆಬೀಳುತ್ತಿವೆ.

ದಿಲ್‌ಕುಷ್ ಲೇಹಂ.

ಒಂದೇ ಸಾರಿಯ ಸೇವನೆಯಿಂದ ಗುಣ. ಇಲ್ಲವ್ಹಾದರೆ ಹಣ ಪರತ.

ಈ ಔಷಧರಾಜ, ಚುನಾಯಿತ ಔಷಧ, ಮೂಲಿಕೆ, ಲೋಹ ಮತ್ತಿತರ ನವಚೈತನ್ಯದಾಯಕ ಪದಾರ್ಥಗಳ ಶಾಸ್ತ್ರೀಯ ಸಮ್ಮಿಳನವಾಗಿದ್ದು, ನಮ್ಮ ಪೂರ್ವಿಕರು ಬಹಳ ಖರ್ಚಿನಿಂದ ಮಹಾರಾಜರು ಮತ್ತು ನವಾಬರುಗಳಿಗಾಗಿ ಪೂರ್ವದಲ್ಲಿ ತಯಾರಿಸುತ್ತಿದ್ದರು. ಈಗ ನಾವು ಈ ಲೇಹವನ್ನು ಗಂಡಸರ ಮತ್ತು ಹೆಂಗಸರ ಸಾರ್ವಜನಿಕ ಉಪಯೋಗಕ್ಕಾಗಿ ತಯಾರಿಸುತ್ತಿದ್ದೇವೆ. ಅದು ಅವರನ್ನು ಯಾವಾಗಲೂ ಯೌವನರಾಗಿರಿಸುತ್ತದೆ. ಅವರ ಪ್ರಕೃತಿಯನ್ನು ಅದು ನವಚೈತನ್ಯಗೊಳಿಸುತ್ತದೆ ಮತ್ತು ಗುಣವನ್ನು ಆರಂಭದಿಂದಲೇ ಕಾಣಬಹುದು. ದಿನೇ ದಿನೇ ಅವರ ಸಾಮರ್ಥ್ಯವೂ ವೀರ್ಯವೂ ವರ್ಧಿಸುವುದು. ಸಂಕ್ಷೇಪತಃ **ದಿಲ್‌ಕುಷ್** ಲೇಹದ ಸ್ವಲ್ಪ ಸೇವನೆಯು ಶರೀರಬಲವನ್ನೂ, ಆರೋಗ್ಯವನ್ನೂ ಮತ್ತು ನವಚೈತನ್ಯವನ್ನೂ ಕೊಡುವುದು.

ಒಮ್ಮೆ ಪರೀಕ್ಷಿಸಿರಿ ಮತ್ತದರ ವರಪ್ರದಾನವನ್ನು ಪಡೆಯಿರಿ.

ಕ್ರಯ: ಹದಿನೈದು ದಿನಗಳ ಸೇವನೆಯ ಡಬ್ಬಿಯೊಂದರ ರೂ. 1—12—0. ಒಂದು ತಿಂಗಳ ಸೇವನೆಯ ಡಬ್ಬಿಯೊಂದರ ರೂ. 3—0—0.

ಬರೆಯುವರೆ ವಿಳಾಸ:-

Dr. K. Siva Prasada Rao,
Rajahmundry,
East Godavary Dt.
4, 26-6

ಅಪೂರ್ವ ಗ್ರಂಥಗಳು.

ಪುರಂದರ ದಾಸರ ಕೀರ್ತನೆಗಳು 5 ಭಾಗಗಳು ಪೂರ್ತಿ 3—7—0. ಋಗ್ವೇದ ಅಥವಾ ಯಜುರ್ವೇದ ವೈಷ್ಣವ ಅಹ್ನಿಕ ಮಂಜರಿ ಕಿತ್ತಾನಾರು ಬೈಂಡು 2—8—0. ಪಂಚದಶೀ ತತ್ವಾರ್ಥ (ಚಿದಂಬರಯ್ಯ) 2—0—0. ಭಗವದ್ಗೀತಾ ಸಾರ ವಿಚಾರ (ಚಿದಂಬರಯ್ಯ) 1—8—0. ಶ್ರೀವೇದಾಂತ ಪಂಚದಶೀ 5—0—0. ನಿಜನಾಥ ಭಕ್ತಿಸಾರ 2—8—0.

ಟಪಾಲು ಖರ್ಚು ಪ್ರತ್ಯೇಕ.

ಅಡ್ವಾನ್ಸಿಲ್ಲದ ಆರ್ಡರ್‌ಗಳಿಗೆ ಗಮನ ಕೊಡಲಾಗುವುದಿಲ್ಲ.

ಸಂಪೂರ್ಣ ಕನ್ನಡ ಕೆಟಲಾಗು ಅಪೇಕ್ಷಿಸುವವರಿಗೆ ಮುಫತ್ತಾಗಿ ರವಾನಿಸಲಾಗುವುದು.

ಎಚ್. ಎನ್. ರಾವ್ ಬ್ರದರ್ಸ್,
ಪುಸ್ತಕ ವ್ಯಾಪಾರಿಗಳು,
ಚಿಕ್ಕಪೇಟೆ, ಬೆಂಗಳೂರು ಸಿಟಿ.

ಹೊಲಿಗೆ ಕೆಲಸ ಮಾಡುವವರಿಗೂ, ಕಲಿಯುವವರಿಗೂ ಇದೊಂದು ಅಲಭ್ಯ ಲಾಭ!

ಹೆಸರಾದ ಹೊಲಿಗೆಯ ಶಾಲೆಗಳಲ್ಲಿ ಪಠ್ಯ ಪುಸ್ತಕವೆಂದು ಮಾನ್ಯತೆಪಟ್ಟ

ಸಚಿತ್ರ ಕರ್ತನಕಲಾ-ವಿಜ್ಞಾನ.

(ಭಾಗ ೧ — ಮರಾಠಿ.)

ಈ ಮೊದಲನೇ ಭಾಗದಲ್ಲಿ ೬ ತರದ ಪೈರಣಿ, ೧೯ ತರದ ಶರ್ಟ್‌ಗಳು, ೨ ನಮೂನೆಯ ಸೆಪರೇಟ್ ಕೊಲರು, ೨ ಜಾತಿಯ ಬನಿಯನ್‌ಗಳು ಮತ್ತು ೪ ತರದ ಇಜಾರುಗಳು ಕತ್ತರಿಸುವ ಶಾಸ್ತ್ರೀಯ ಪದ್ಧತಿಯು ಅಗದೀ ಸುಲಭ ರೀತಿಯಿಂದ ವಿವರಿಸಲ್ಪಟ್ಟಿದೆ. ಈ ವಿನಹ ೨೬ ಜಾತಿಯ ಫ್ಯಾಶನ್ನು ಆರ್ಟ್ ಫೋಟೋಗಳಿವೆ. ಈ ಪುಸ್ತಕದ ಸಹಾಯದಿಂದ ಯಾರೂ ವಸ್ತ್ರ ಕತ್ತರಿಸುವ (ಕಟಿಂಗ್) ಕಲೆಯನ್ನು ಸುಲಭವಾಗಿ ಕಲಿಯಬಹುದು.

ವಸ್ತ್ರದ ಬ್ಯಾಂಡಿಂಗ ಸಮೇತ ಪ್ರತಿ ೧ಕ್ಕೆ ರೂ. ೨—೮—೦. (ಅಂಚೆ ಹಾಸಲು ಬೇರೆ).

ಸೂಚನೆ:— ಈ ಪುಸ್ತಕವನ್ನು ಕನ್ನಡಿಸಿ ಪ್ರಕಟಿಸುವ ಸಂಕಲ್ಪವಿದೆ. ಕನ್ನಡದಲ್ಲಿ ಇಂಥ ಪುಸ್ತಕವು ಇದೇ ಮೊದಲನೇದಾದ್ದರಿಂದ ಬೇಕಷ್ಟೇ ಪ್ರತಿಗಳನ್ನು ತೆಗೆಯುವೆವು. ಕಟಿಂಗ ಕಲೆಯನ್ನು ಶಾಸ್ತ್ರೀಯ ಪದ್ಧತಿಯಿಂದ ಕಲಿಯಬಯಸುವವರು ಈ ಪುಸ್ತಕಕ್ಕಾಗಿ ಇವೀಗಲೇ ರೂ. ೨—೮—೦ ಕಳಿಸಿ ಹೆಸರು ದಾಖಲಿಪಡಿಸಿಕೊಳ್ಳುವುದು. **ಜೂನ್ ತಿಂಗಳ ಕೊನೆಯೊಳಗೆ** ಹೆಸರು ದಾಖಲಿಪಡಿಸುವವರಿಗೆ ಅಂಚೆ ವೆಚ್ಚ ಮಾಫಿಯಿಂದ ಜುಲಾಯಿ ತಿಂಗಳಲ್ಲಿ ಪುಸ್ತಕವನ್ನು ಕಳಿಸಿಕೊಡುತ್ತೇವೆ.

ಟೇಲರ್ಸರಿಗೆ ಬೇಕಾಗುವ ಫ್ಯಾಶನ್ ಬೂಕುಗಳನ್ನು, ಫ್ಯಾಶನ್ ಸ್ಲೇಟುಗಳನ್ನು, ಬಾಗಿಲಿಗೆ ಹಚ್ಚುವ ದೊಡ್ಡ ರಂಗೀತ ಚಿತ್ರಗಳನ್ನೂ, ಇತರೇ ಅವಶ್ಯಕ ಸಾಮಾನುಗಳನ್ನೂ ಯೋಗ್ಯ ದರದಿಂದ ಕಳಿಸಿಕೊಡುವೆವು. ಈ ಮುಂದಿನ ಎರಡು ಭಾಗಗಳನ್ನು ಅದಷ್ಟು ಬೇಗನೇ ಪ್ರಸಿದ್ಧಿಸುವವರಿದ್ದೇವೆ.

ವಿಶೇಷ ಮಾಹಿತಿ ಬೇಕಾದರೆ ಈ ಕೆಳಗಿನ ಪತ್ತೆಗೆ ಬರೆಯಿರಿ:—

ROYAL ART PUBLISHERS,
Amir Building, Tribhuvan Road,
BOMBAY, 4.

ರೋಯಲ್ ಆರ್ಟ್ ಪಬ್ಲಿಶರ್ಸ್,
ಅಮೀರ ಬಿಲ್ಡಿಂಗ್, ತ್ರಿಭುವನ ರೋಡ್,
ಮುಂಬಯಿ, 4.

THE DECCAN CO.,

Cantonment, :: MANGALORE,
Agents for
"Mohini Coffee Powder"
and
"Kelagur Tea"

ಡೆಕ್ಕಾನ್ ಕಂಪೆನಿ

ಕೆಂಟೋನ್‌ಮೆಂಟ್—ಮಂಗಳೂರು.

ಕಾಫಿ ತೋಟಗಳಿಗೂ, ತೆಂಗು ಇತ್ಯಾದಿ ಫಲವಸ್ತುಗಳ ಮರಗಳಿಗೂ, ಅಡಕೆ ತೋಟಗಳಿಗೂ ಬೇಕಾಗುವ ಗೊಬ್ಬರಗಳು ಇವರಲ್ಲಿ ಯಾವಾಗಲೂ ದೊರೆಯುತ್ತವೆ.

ಪ್ರಸಿದ್ಧ "ಮೋಹಿನಿ ಕಾಫಿ ಹುಡಿ" ಮತ್ತು "ಕೆಳಗೂರ್ ಟೀ" ಇದರ ಏಜಂಟರು.

— ಸನ್ನಾಹರ —

ಸುಬೋಧಶತಕ

ಟೆಕ್ಸ್ಟ್ ಬುಕ್ ಕಮಿಟಿಯಲ್ಲಿ ಮಂಜೂರಾದ

ಪಾಠಶಾಲಾ—ಪಠ್ಯಪುಸ್ತಕ.

ತಿದ್ದಿ ಬೆಳೆಸಿದ 2ನೇ ಆವೃತ್ತಿ-ಬೆಲೆ: 0-2-6. ಎಲ್ಲ ಪುಸ್ತಕವ್ಯಾಪಾರಿಗಳಲ್ಲೂ ಸಿಗುವುದು. ಒಂದಾಣೆಯ ಅಂಚೆಚೀಟನ್ನು ನಮಗೆ ಕಳುಹಿಸುವ ಉಪಾಧ್ಯಾಯರಿಗೆ ಒಂದು ಪ್ರತಿ ಮಾದರಿಗಾಗಿ ಕಳುಹುವೆವು.

ವಿಳಾಸ:—

ವಿಕ್ಟೋರಿಯಾ ಮುದ್ರಾಶಾಲೆ,
ಬಂಟ್ವಾಳ, ದ. ಕನ್ನಡ.

12, 8-5.

ಡಾಕ್ಟರ್ ಸಿ. ಮತಾಯಸರ ಸಿದ್ಧೌಷಧಗಳು.

ಮಸ್ಕೊ ಪಿಲ್ಸ್—ಈ ಮಾತ್ರೆಗಳು ಮಕ್ಕಳ ಚೇಷ್ಟೆಯ ವ್ಯಾಧಿಗೆ ಅದ್ಭುತಕರ ಔಷಧ. ಮಕ್ಕಳು ಯಾವಾಗಲೂ ಕೂಗುತ್ತಾ ಇರುವದು, ಕೈಕಾಲು ನಡುಗುವದು, ಮೂರ್ಛೆಯಾಗುವದು ಮುಂತಾದ ರೋಗಗಳನ್ನು ಗುಣಪಡಿಸುತ್ತದೆ. ರೋಗವಿಲ್ಲದವರಿಗೆ ಕೊಟ್ಟರೂ ಸುಖವಾಗಿರುವರು. ಒಳ್ಳೇ ತ್ರಾಣ ಕೊಡುವ ಶಕ್ತಿ ಇದೆ. ಕೇವಲ ಹಸುಮಗುವಿಗೂ ನಿರ್ಭಯವಾಗಿ ಕೊಡಬಹುದು. ಬೆಲೆ, 100 ಮಾತ್ರೆ I ಕ್ಲಾಸ್ 4 ರೂ; II ಕ್ಲಾಸ್ 1½ ರೂ.

ಇದಲ್ಲದೆ ಟಿಸ್ಕೂ ಮದ್ದುಗಳೂ, ಹೊಮ್ಯೋಪೆತಿಕ್ ಔಷಧಗಳೂ, ಹೊವೊ ಕೊಂಬಿನೊ ಔಷಧಗಳೂ ದೊರಕುತ್ತವೆ. ಹೆಚ್ಚಿನ ಮಾಹಿತಿಗೆ ಮತ್ತು ಇಂಗ್ಲಿಷ್ ಕ್ಯಾಟಲಾಗಿಗೆ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಡಾಕ್ಟರ್ ಸಿ. ಮತಾಯಸ್, ಎಂ. ಡಿ. (ಹೊವ್ಯೊ) ಎಂ. ಬಿ. (ಆಯುರ್)
ಪೂವರ್ ಸರ್ವಿಸ್ ಲೋಜ್, ಮಂಗಳೂರು.

Complete Service

We are here to serve your banking requirements, and to place at your command the practical cooperation of our resources and banking facilities. Whether your needs are local, provincial or world-wide this bank through its experience, connections and organisations is eminently qualified to serve you.

THE PALAI
CENTRAL BANK, LIMITED,
(INCORPORATED IN TRAVANCORE.)
Bunder Road, MANGALORE.
London Agents: LLOYDS BANK, LIMITED.
New York ,, : NATIONAL CITY BANK OF NEW YORK.

ವಿಶ್ವವಿಚಾರ

(ವಿಮಾನಪತ್ರ)

ಇಟೆಲಿಯ ಮಹತ್ವಾಕಾಂಕ್ಷೆ:—ಒಂದು ಕಾಲದಲ್ಲಿ ರೋಮ್ ಪಟ್ಟಣದ ಅಧಿಕಾರದೊಳಗೆ ಭೂಮಧ್ಯ ಸಮುದ್ರದ ದಂಡೆಯಲ್ಲಿರುವ ಎಲ್ಲಾ ಪ್ರದೇಶಗಳು ಸೇರಿಕೊಂಡಿದ್ದು ರೋಮಿನ ಚಕ್ರವರ್ತಿಗಳ ಕತ್ತಿಗೆ ಯುರೋಪ ಖಂಡವೆಲ್ಲ ನಡುಗುತಿತ್ತು. ಅದೇ ರೀತಿಯ ಚಕ್ರಾಧಿಪತ್ಯವನ್ನು ಸ್ಥಾಪಿಸುವುದೇ ಇಟಲಿಯ ಮಹತ್ವಾಕಾಂಕ್ಷೆ. ಆದ್ದರಿಂದ ಅಬಿಸ್ಸೀನಿಯವು ಕೈವಶವಾದೊಡನೆ ಇಟೆಲಿಯ ರಾಜನಿಗೆ ಚಕ್ರವರ್ತಿಯೆಂಬ ಬಿರುದನ್ನು ಮುಸ್ಸೊಲಿನಿಯು ಕೊಡಿಸಿದನು. ಚಕ್ರವರ್ತಿಯೆನ್ನಿಸುವುದರ ಜೊತೆಯೆ ರಾಜ್ಯವಿಸ್ತರಣ. ರಾಜ್ಯವಿಸ್ತರಣವೆಷ್ಟಿದ್ದರೆ ಕತ್ತಿಯ ಬೀಸಾಟ. ಇದಕ್ಕಂತೂ ಇಟೆಲಿಯು ಸೊಂಟಗಟ್ಟಿಯೆ ಇದೆ. ಮುಸ್ಸೊಲಿನಿಯು ಫೆಸ್ಸಿಸ್ಟ್ ತತ್ವದಲ್ಲಿ ಶಾಂತಿಗೆ ಸ್ಥಾನವೇ ಇಲ್ಲ. ಹಿಂದೆ ಮಹಾಯುದ್ಧಕ್ಕೆ ಮುಂಚೆ ಲೋಕವನ್ನು ಗೆಲ್ಲುವುದಕ್ಕೆ ಜರ್ಮನಿಯು ಹೇಗೆ ಉತ್ಸಾಹಗೊಂಡು ಮುಂದೊತ್ತಿತೋ ಹಾಗೆಯೆ ಇಟೆಲಿಯು ಈಗ ಭೂಮಧ್ಯಸಮುದ್ರದ ದಂಡೆಗಳಲ್ಲಿರುವ ರಾಜ್ಯಗಳನ್ನೆಲ್ಲ ನುಂಗಿಬಿಡಬೇಕೆಂದು ಹಾತೊರೆಯುತ್ತಿದೆ. ಈಗ ಒಂದು ಹೆಜ್ಜೆ ಇಟ್ಟಾಯಿತು. ಈಗ ಮುಂದಿನ ಹೆಜ್ಜೆಗಳನ್ನು ಎಲ್ಲಿ ಇಡಬೇಕು? ಒಸ್ಟ್ರಿಯ, ಹಂಗೆರಿ, ಜೆಕೊಸ್ಲೊವೇಕಿಯ ಇವು ಮಹಾಯುದ್ಧದನಂತರ ಸ್ವತಂತ್ರವಾದರೂ ಒಂದು ಕಡೆ ಜರ್ಮನಿ, ಒಂದು ಕಡೆ ಇಟೆಲಿ ಇವುಗಳ ಮೇಲೆ ಕಣ್ಣಿಟ್ಟಿವೆ. ಒಳಸಂಚು ನಡಿಸುತ್ತಾ ಇವೆ. ಮಹಾಯುದ್ಧದ ಆರಂಭದಲ್ಲಿಯೇ ಇಟೆಲಿಯು ಇವುಗಳ ಕೈಬಿಟ್ಟಿತು ಎಂದು ಇಟೆಲಿಯ ಮೇಲೆ ಈ ರಾಜ್ಯಗಳಿಗೆ ಒಂದು ಬಗೆಯ ಅವಿಶ್ವಾಸವಿದೆ. ಜರ್ಮನಿಗೆ ಇವು ಹೆದರುತ್ತವೆ. ಹೇಗೂ ಇಟೆಲಿ ಮತ್ತು ಜರ್ಮನಿ ಪರಸ್ಪರ ಮೈತ್ರಿ ಮತ್ತು ಒಪ್ಪಂದವನ್ನು ಮಾಡಿ ಜರ್ಮನಿಯು ಪಶ್ಚಿಮ ಕಡೆಗೂ ಇಟೆಲಿಯು ಯುರೋಪದಲ್ಲಿ ಪೂರ್ವಕಡೆಗೂ ಕೈಚಾಚುವುದಾದರೆ ಇತ್ತಟ್ಟಿನವರಿಗೂ ಕಕ್ಕಿ ಬರಲಾರದು. ಆದ್ದರಿಂದ ಆಸ್ಟ್ರಿಯ, ಹಂಗೆರಿ, ಮತ್ತು ಜೆಕೊಸ್ಲೊವೇಕಿಯದ ಕಡೆಗೂ ರ್ಹೈನ ಲೆಂಡದ ಕಡೆಗೂ ಜರ್ಮನಿಯು ಕಾಲು ಚಾಚಲಿಕ್ಕೆ ಇಟೆಲಿಯು ಕಣ್ಣುಸನ್ನೆಮಾಡುತ್ತದೆ. ಈಗ ಇಟೆಲಿಗೆ ಪೂರ್ವಕಡೆಯಲ್ಲಿ ಕಾಲುಚಾಚಲಿಕ್ಕೆ ಜುಗೊಸ್ಲೋವಿಯ, ಬಲ್ಗೇರಿಯಾ, ಗ್ರೀಸ್, ತುರ್ಕಿ ಇವು ಅಡ್ಡವಾಗಿವೆ. ಆದರೆ ಅಲ್ಬೇನಿಯವು ಇಟೆಲಿಯ ಆಶ್ರಯದಲ್ಲಿದ್ದು ಜೆಕೊಸ್ಲೊವೇಕಿಯದ ಕೊರಳಿಗೆ ಕೊಂಡಿಯನ್ನು ಬಿಗಿಯುತ್ತದೆ. ಆದ್ದರಿಂದ ಈ ಎರಡು ರಾಜ್ಯಗಳೊಳಗೆ ಕಲಹವೆಬ್ಬಿಸುವುದು ಇಟೆಲಿಗ ಏನೇನೂ ಕಷ್ಟವಿಲ್ಲ. ರುಮೇನಿಯಕ್ಕೆ ಬಲ್ಗೇರಿಯ ಮತ್ತು ಹಂಗೇರಿ ಕಿಬ್ಬದಿಗೆ ತುಳಿದಾವು ಎಂಬದರಿಂದ ಅದು ತೆಪ್ಪಗೆ ಪಿಳಿಪಿಳಿ ನೋಡುತ್ತಿದೆ. ಗ್ರೀಸ್ ದೇಶವು ಬಲ್ಕಂದಿಕೊಂಡಿದ್ದು ಇಟೆಲಿಯ ನೌಕಾಸೇನೆಗೆ ಹೆದರಿಕೊಂಡಿದೆ. ಆದ್ದರಿಂದ ಗ್ರೀಸನ್ನು ಮುರಿದು ತನ್ನ ಅಧೀನ ಮಾಡಿಕೊಳ್ಳುವುದು ಇಟೆಲಿಗೆ ಕಷ್ಟವಿಲ್ಲ. ಬಲ್ಗೇರಿಯದ ರಾಜನು ಇಟೆಲಿಯ ಹೆಣ್ಣನ್ನು ಮದುವೆಯಾಗಿದ್ದಾನೆ. ಇನ್ನು ತುರ್ಕಿ, ಸಾಯ್ರಿಯಾ, ಪೆಲೆಸ್ತೀನ, ಈಜಿಪ್ಟ ಇವುಗಳಿವೆ. ತುರ್ಕಿಗೆ ಈ ಅಂಜಿಕೆಯಿದ್ದುದರಿಂದಲೇ ಅದು ಡಾರ್ಡನೆಲ್ಸ್ ಜಲಸಂದನ್ನು ಕೋಟೆಗಳಿಂದ ಭದ್ರಪಡಿಸುವುದಕ್ಕೆ ಮಿತ್ರಪಕ್ಷದವರ ಅಭಿಮತವನ್ನು ಕೇಳಿ ಆ ಕುರಿತು ಚರ್ಚೆಗಳು ನಡೆಯುತ್ತವೆ.

ಇದರ ಉದ್ದೇಶವೇನೆಂದರೆ ಶತ್ರುವಿನ ಸೇನೆಯು ಯುರೋಪ ಖಂಡದಿಂದ ಆಸ್ಯಕ್ಕೆ, ಅಂದರೆ ಎನಟೋಲಿಯ ಪ್ರಾಂತಕ್ಕೆ ಕಾಲಿಡಬೇಕಾದರೆ ಈ ಜಲಸಂದನ್ನು ದಾಟಬೇಕು. ಅದನ್ನು ಭದ್ರಪಡಿಸದಿದ್ದರೆ ಈ ಮೊದಲು ಜರ್ಮನಿಯು ತರಾಯಿಸಿದಂತೆ ಈಗ ಇಟೆಲಿಯು ಮುಂದೊತ್ತಬಹುದು. ಆಗ ಭೂಮಾರ್ಗವಾಗಿಯೆ ಎನಟೋಲಿಯ, ಸಾಯ್ರಿಯಾ, ಪೆಲೆಸ್ತೀನಗಳು ಇಟೆಲಿಯ ವಶವಾಗಬಹುದು; ಫ್ರಾನ್ಸಿಗೆ ಸಹಾಯಕವಾಗಿ ಬರಬಹುದಾದ ರುಶ್ಯದ ನೌಕಾಸೇನೆಗೆ ಕಪ್ಪುಸಮುದ್ರದಿಂದ ಭೂಮಧ್ಯಸಮುದ್ರಕ್ಕೆ ಬರಲು ಎಡೆಯಿಲ್ಲ. ಇಟೆಲಿಯ ನೌಕಾಸೇನೆಯು ಭೂಮಧ್ಯಸಮುದ್ರದಲ್ಲಿ ನಿರ್ಭೀತವಾಗಿ ಚಲಿಸತೊಡಗಿದರೆ ಇಂಗ್ಲೆಂಡಿಗೆ ಸುವೇಜ ಕಾಲುವೆಯನ್ನು ದಾಟಿ ಹಿಂದುಸ್ಥಾನಕ್ಕೆ ಬರುವ ದಾರಿಯನ್ನು ಅಡ್ಡಕಟ್ಟಿದಂತಾಗುವುದು. ಅದೇ ಕಾರಣದಲ್ಲಿ ಇಟೆಲಿಯು ಆಫ್ರಿಕದ ಉತ್ತರ ಕರಾವಳಿಯಲ್ಲಿ ಲಿಬಿಯದಿಂದ ಇಜಿಪ್ಟದ ಗಡಿಗೆ ಬಂದರೆ ಇಜಿಪ್ಟದ ಧೋರಣವು ಹೇಗೆ ನಿಂತೀತು ಎಂದು ಹೇಳಬರುವುದಿಲ್ಲ. ಆಗ ಆಫ್ರಿಕದ ಉತ್ತರ ಭಾಗದ ದೊಡ್ಡ ಅಂಶವು ಇಟೆಲಿಯ ಅಧೀನ ಅಥವಾ ಅದರ ಆಶ್ರಯದಲ್ಲಿದ್ದರೆ ಇಂಗ್ಲೆಂಡಿನ ಮೂಗನ್ನೆ ಸುವೇಜದಲ್ಲಿ ಒತ್ತಿದಂತಾಗುವುದು. ಅಂಥ ಅಡಚಣಿಯನ್ನು ಪರಿಹರಿಸಲಿಕ್ಕೆ ಇಂಗ್ಲೆಂಡು ಸರ್ವವಿಧದ ಸೈನ್ಯಸರಂಜಾಮನ್ನು ಬಹಳ ಲಗುಬಗೆಯಿಂದ ತಯಾರಿಸುತ್ತಿದ್ದು ಅದು ಸಿದ್ಧವಾಗುವ ವರೆಗೆ ಇಟೆಲಿಯೊಡನೆ ಹೋರಾಟಕ್ಕೆ ಮುಂದರಿಸಲು ಉದ್ಯುಕ್ತವಾಗಿಲ್ಲ. ಅದಕ್ಕಾಗಿ 'ಯುದ್ಧ ಮುಗಿದ ಮೇಲೆ ನಿರ್ಬಂಧಗಳ ಅಗತ್ಯವೇನು?' ಎಂಬ ತಾತ್ವಿಕ ವಿಚಾರಗಳನ್ನು ಬ್ರಿಟನ್ನು ಕೈಕೊಂಡು ಜಿನಿವಾದಲ್ಲಿ ಈ ನಿರ್ಬಂಧಗಳನ್ನು ಕಿತ್ತೊಗೆಯಲಿಕ್ಕೆ ತವಕಗೊಂಡಿದೆ. ಫ್ರಾನ್ಸು ಇಂಗ್ಲೆಂಡಿನ ಬೆನ್ನು ತುರಿಸುತ್ತಾ ಇಂಗ್ಲೆಂಡಿನ ಮಾತುಗಳಿಗೆ ಸೈಗುಟ್ಟುವಂತಿದೆ. ಆದರೆ ಜರ್ಮನಿಯು ಲೋಕಸತ್ತೆಗಾಗಿ ಪೇಚಾಡಿ ಇದ್ದುದನ್ನು ಕಳಕೊಂಡಿತು. ಇಟೆಲಿಯ ಗತಿ ಏನಾಗುತ್ತದೊ ದೇವರೇ ಬಲ್ಲ.

ಈಜಿಪ್ಟದ ಸಮಸ್ಯೆ:—ಈ ಸಂದರ್ಭದಲ್ಲಿ ಈಜಿಪ್ಟವು ತನ್ನ ಕಳೆದುಕೊಂಡ ಸ್ವಾತಂತ್ರ್ಯವನ್ನು ಸಂಪಾದಿಸಲಿಕ್ಕೆ ಹಾತೊರೆಯುತ್ತದೆ. ಅವಿವೇಕದಿಂದ ಇಂಗ್ಲೆಂಡು ಈ ಬಿಸಿನೀರ ಗುಟುಕನ್ನು ನುಂಗಲೇ ಬೇಕೆಂದು ದುಡುಕಿದರೆ ಹೊಟ್ಟೆ ಸುಡುವ ಸಂದರ್ಭ ಬಂದೊದಗೀತು.

ಈಜಿಪ್ಟವು ಕೇಳುವುದು ಇಷ್ಟೇ. ೧. ಈಜಿಪ್ಟ ಮತ್ತು ಬ್ರಿಟನ್ನುಗಳೊಳಗೆ ಸ್ನೇಹ ಭಾವದ ಒಪ್ಪಂದವಿರಬೇಕಲ್ಲದೆ ಈಜಿಪ್ಟವು ಬ್ರಿಟನ್ನಿನ ಆಶ್ರಿತರಾಜ್ಯ ಎಂಬ ಭಾವನೆಯನ್ನು ಬ್ರಿಟನ್ನು ಬಿಟ್ಟುಬಿಡಬೇಕು. ೨. ಈಜಿಪ್ಟ ಸ್ವತಂತ್ರರಾಜ್ಯವಾಗಬೇಕು. ೩. ಬ್ರಿಟನ್ನು ಈಜಿಪ್ಟದ ಮೇಲೆ ಹೊರಿಸಿದ ಕೆಲವು ನಿರ್ಬಂಧದ ಶರ್ತಗಳನ್ನು ಕಿತ್ತೊಗೆಯಬೇಕು. ಇವುಗಳಲ್ಲಿ ಒಂದನೆದು—ಯುರೋಪಿಯನ್ ಯಾವ ಜನಾಂಗದವನೆ ಆಗಲಿ, ಆತನಿಗೆ ಕಂದಾಯ ಹೊರಿಸಕೂಡದು, ತಕ್ಷೀರಿಗಾಗಿ ಕೈದುಮಾಡ ಕೂಡದ್ದು. ಆತನು ಎಂಥ ತಕ್ಷೀರು ಮಾಡಿದರೂ ಆತನ ಮೇಲೆ ವಿಚಾರ ನಡಿಸುವ ಅಧಿಕಾರವು ಒಂದು ಯುರೋಪಿಯನ್ ಕೋರ್ಟಿಗೆ ಇದೆ. ಈ ಕೋರ್ಟು ಎಲ್ಲಾ ಯುರೋಪಿಯನರ ಶಿಕ್ಷೆ-ರಕ್ಷೆಯ ಅಧಿಕಾರವನ್ನು ವಹಿಸಿಕೊಂಡಿದೆ. ಇದೊಂದು ಯುರೋಪಿಯನ್ ಜನಾಂಗಗಳ ಪ್ರಾಶಸ್ತ್ಯವನ್ನು ದೇಶೀಯರ ದೃಷ್ಟಿಯಲ್ಲಿ ಹೆಚ್ಚಿಸಿ ಈಜಿಪ್ಟ ಸರಕಾರವು ಆಶ್ರಿತ ಸರಕಾರವೆಂದು ಬಹಿರಂಗ ಪಡಿಸುವ ಒಂದು ವಿಧಾನ. ಈ ಇಲಾಖೆಯನ್ನೆ ಕಿತ್ತುಹಾಕಬೇಕೆಂದು ಈಜಿಪ್ಟದವರ ಸಾಧನೆ. ೪. ತನ್ನ ರಾಷ್ಟ್ರರಕ್ಷಣೆಯ ಬಗ್ಗೆ ಬೇಕಾಗುವ ಏರ್ಪಾಡುಗಳನ್ನು ಪ್ರತಿಬಂಧಕವಿಲ್ಲದೆ ಈಜಿಪ್ಟವು ಕೈಕೊಳ್ಳಲಿಕ್ಕೆ ಅಡ್ಡಕಟ್ಟಕೂಡದು. ಅಗತ್ಯವಿದ್ದರೆ ಈಜಿಪ್ಟವು ಕಡ್ಡಾಯವಾಗಿ ಸೈನ್ಯಕ್ಕೆ ಪ್ರಜಾಜನಗಳನ್ನು ದಾಖಲುಮಾಡುವುದಕ್ಕೆ ಬ್ರಿಟನ್ನು ಅಡ್ಡಿಬರಕೂಡದು. ೫. ಸೂಡನವು ಈಜಿಪ್ಟದ ಅಧಿಕಾರಕ್ಕೆ ಸೇರಿದ ಅಂಶವೆಂದು ಬ್ರಿಟನ್ನು ಒಪ್ಪಬೇಕು. ಸೂಡನ್ನಿನಲ್ಲಿ ಹತ್ತಿ ಇತ್ಯಾದಿಗಳ ಪೈರಿನ ಪೈದಾಸ್ತು ವಿಶೇಷವಾಗಿ ಇರುವುದರಿಂದ ಅದನ್ನು ಬಿಟ್ಟುಕೊಡುವುದಕ್ಕೆ ಬ್ರಿಟನ್ನಿಗೆ ಏನೇನೂ ಮನಸ್ಸಿನಲ್ಲಿಲ್ಲ. ಈಜಿಪ್ಟದ ಇತರ ಕೇಳಿಕೆಗಳನ್ನು ಒಪ್ಪದೆ ಹಲವು ವರ್ಷಗಳಿಂದ ಈ ಚರ್ಚೆಯು ನಡೆಯುತ್ತಾ ಇದೆ. ರಾಷ್ಟ್ರಪಕ್ಷದವರನ್ನು ಇದಕ್ಕೋಸ್ಕರ ನಿರ್ಬಂಧದಲ್ಲಿಟ್ಟು ಅಲ್ಲಿಯ ಪಾರ್ಲಿಮೆಂಟ್ ಸಭೆಯನ್ನು ರದ್ದುಪಡಿಸಿ ಮೊದಲಿನ ಕೈಡಿವ (ಈಜಿಪ್ಟದ ಅರಸ) ನನ್ನು ಸೂತ್ರದ ಗೊಂಬೆಯಂತೆ ಬ್ರಿಟನ್ನು ಕುಣಿದಾಡಿಸುತ್ತಿತ್ತು. ಅವನು ಸಾಯುವುದಕ್ಕೆ ಮುಂಚೆ ಪಾರ್ಲಿಮೆಂಟನ್ನು ಪುನಃ ನಿರ್ಮಿಸಿದ್ದರಿಂದ ಆದ ಚುನಾವಣಿಯಲ್ಲಿ ರಾಷ್ಟ್ರಪಕ್ಷದವರೇ ತಂಡತಂಡವಾಗಿ ಬಂದು ಪುನಃ ಹಿಂದಿನ ಕೇಳಿಕೆಗಳನ್ನೇ ಬ್ರಿಟನ್ನಿನೊಡನೆ ಪ್ರಸ್ತಾವಿಸುತ್ತಿದ್ದಾರೆ. ವಿನೇಕವಿದ್ದರೆ ಬ್ರಿಟನ್ನು ಈ ಕಾಲದಲ್ಲಿ ಈಜಿಪ್ಟಕ್ಕೆ ಉದಾರಬುದ್ಧಿಯಿಂದ ಅಧಿಕಾರ ಒಪ್ಪಿಸಿ ಅದರ ಮೈತ್ರಿಯನ್ನು ಸಂಪಾದಿಸಿ ಸುವೇಜು ಕಾಲಿವೆಯನ್ನು ಸುರಕ್ಷಿತಪಡಿಸಿಕೊಂಡೀತು. ಇಲ್ಲವಾದರೆ ಇದರ ಪರಿಣಾಮವೆಲ್ಲಿಗೆ ಹೋಗಿ ನಿಂತೀತು ಎಂದು ಹೇಳಬರುವುದಿಲ್ಲ.

ಇಂಡಿಯಾದ ಪ್ರಮುಖ ಟಾನಿಕ್

ಆತಂಕನಿಗ್ರಹ

ಮಾತ್ರೆಗಳು.

ಮಲಬದ್ಧತೆ, ಮನೋದೌರ್ಬಲ್ಯ, ನರಗಳ ಬಲಹೀನತೆ ಇವನ್ನು ಗುಣವಡಿಸಿ, ಆರೋಗ್ಯಕಾರಿಯಾದ ಹಸಿವು ಹುಟ್ಟಿಸಿ ರಕ್ತಶುದ್ಧಿ ಮಾಡುತ್ತದೆ.

ಉಚಿತವಾಗಿ ಕೊಡುವ

"ಜೀವದ ವೃಕ್ಷಮೂಲ"

ಒಂದು ಡಬ್ಬಿ ಉಪಯೋಗಿಸಿ ನೋಡಿ, ಮೂವತ್ತೆರಡು ಮಾತ್ರೆಗಳ ಡಬ್ಬಿ ಗಕ್ಕೆ ಒಂದು ರೂಪಾಯಿ ಮಾತ್ರ.

ಕ್ಯಾಟಲಾಗಿಗೆ ಬರೆಯಿರಿ:—

ಆತಂಕನಿಗ್ರಹ ಫಾರ್ಮೆಸಿ,
ಚಿಕ್ಕಪೇಟೆ, ಬೆಂಗಳೂರು-ಸಿಟಿ.

ಏಜಂಟರು—
ಪಲ್ಲ್ ಎಂಡ್ ಸನ್ಸ್, ಮಂಗಳೂರು.

ನೂತನವಾಗಿ ಪ್ರಕಟಿಸಲ್ಪಡುವ ರಿಕಾರ್ಡುಗಳು

1936 **ಜುಲಾಯಿ**

ತೆಲುಗು

ವಿದ್ವಾನ್ ಎಂ. ರಾಜಗೋಪಾಲ ಶರ್ಮನವರ
"ಎದುಟ ನಿಲ ಚಿತ್ರೇ" ಎಂಬುವ ತ್ಯಾಗರಾಜಕೃತಿ,
ಶ್ರೀಮತಿ ಚಿ. ರಾಜರತ್ನಂ, ಶ್ರೀಮತಿ ಬಿ. ಕಮಲನವರ
ನೂತನ ನೃತ್ಯ ಗೀತಗಳು.
ಶ್ರೀಯುತ ಸಿ. ಅಪ್ಪಲಾಚಾರಿಯವರ ಖವಾಲೀಗಳು,
ಶ್ರೀಯುತ ಬಿ. ಚೆಂಗಾರೆಡ್ಡಿಯವರ ಷೇಕ್ಸ್‌ಪಿಯರ್ ನಾಟಕ
ಭಾಗಗಳು (ಉಪೋದ್ಘಾತ ಸಹ),

ತಮಿಳು

ಮಿಸ್ ಇಂದುಬಾಲಾ (ಕಲಕತ್ತಾ)ನವರ
ತಮಿಳು ಟಾಕೀ ಫಿಲ್ಮ್ ಗೀತಗಳು,

ಮಾದ್ಯ

ಗುರುಸ್ವಾಮಿಯವರ "ಹಂಸಾನಂದಿ"
ರಾಗ ಗತ್ (ನಾಗಸ್ವರದಲ್ಲಿ) ಇತ್ಯಾದಿ ರಿಕಾರ್ಡುಗಳಿರುವವು.

ಇವುಗಳನ್ನೀಗಲೇ ನಮ್ಮ ವ್ಯಾಪಾರಿಗಳಲ್ಲಿ ಕೊಂಡು ಕೇಳುವಿರಿ!

*

ಈ ತಿಂಗಳಿನ ಹೊಸ ಕೆಟಲಾಗು ಉಚಿತ!

ದಿ ಗ್ರಾಮಫೋನ್ ಕಂಪೆನಿ, ಲಿಮಿಟೆಡ್,

45, ಸೌತ್‌ಪೆರೇಡ್, ಬೆಂಗಳೂರು.

"ರಿಸ್ ಮಾಸ್ಟರ್ಸ್ ವಾಯ್ಸ್"

ದೊರೆಯುವ ಸ್ಥಳ:—
ಎಮ್. ಎಮ್. ಶ್ಯಾನುಭಾಗ ಎಂಡ್ ಸನ್, ಮಂಗಳೂರು.

ANNOUNCEMENT

CANARA BANK, LIMITED

BEGS .TO ANNOUNCE OPENING BRANCHES ON MONDAY THE 6TH JULY 1936 AT

CANNANORE

&

ARSIKERE

WHERE EVERY FACILITY WILL BE GIVEN TO CUSTOMERS TO TRANSACT ALL KINDS OF BANKING BUSINESS AT VERY COMPETITIVE RATES.

ಕಂಠೀರವ

(ವಸಂತತಿಲಕವೃತ್ತಮ್)

ನಿಂದಂತು ನೀತಿನಿಪುಣಾ ಯದಿ ವಾ ಸ್ತುವಂತು ।
ಲಕ್ಷ್ಮೀಸ್ಸಮಾವಿಶತು ಗಚ್ಛತು ವಾ ಯಥೇಷ್ಟಮ್ ॥
ಅದ್ಯೈವ ವಾ ಮರಣಮಸ್ತು ಯುಗಾಂತರೇ ವಾ ।
ನ್ಯಾಯ್ಯಾತ್ಪಥಃ ಪ್ರವಿಚಲಂತಿ ಪದಂ ನ ಧೀರಾಃ ॥

[ಭರ್ತೃಹಂ.

(ಜಾ ಪದಿ)

ನಿಂದಿಸಲಿ ವಂದಿಸಲಿ, ಸಂದ ಧೀರರು ತಾ- ।
ಎಂದಿರೆಯು ಹೊಂದಿರಲಿ ನಂದಿರಲಿ, ಮತ್ತಾ ॥
ಇಂದಿಗೊ ಯುಗಾಂತರಕೊ ಬಂದಿರಲಿ ಮರಣಂ, ।
ಹಿಂದಿಡರು ನ್ಯಾಯಪಥದಿಂದೊಂದು ಚರಣಂ! ॥

[M. N.

XVIII] .ಮಂಗಳೂರು, ತಾರೀಕು ೩—೭—೧೯೩೬ [೨೮

೧೮೫೮ ಧಾತು ಸಂವತ್ಸರದ ಆಷಾಢ ಶು। ೧೪ ಶುಕ್ರವಾರ.

ಶಾಸ್ತ್ರವೂ, ಆಚಾರವೂ.

ನಮ್ಮ ಮುನಿಸಿಪಲ್ ಕೌನ್ಸಿಲಿನ ವೈಸ್ ಚೆಯರ್‌ಮ್ಯಾನರಾಗಿದ್ದ ರಾವ್ ಬಹದೂರ್ ಎನ್. ಎನ್. ಸುವರ್ಣರವರ ರಾಜೀನಾಮೆಯಿಂದ ಬರೆದಾಗಿದ್ದ ಆ ಸ್ಥಾನಕ್ಕೆ, ನಿನ್ನೆ ಸಂಜೆ, ಮುನಿಸಿಪಲ್ ಆಫೀಸಿನಲ್ಲಿ, ಚೆಯರ್‌ಮ್ಯಾನರಾದ ಡಾ. ವಿಠಲ ಸೆಟ್ಟರ ಅಧ್ಯಕ್ಷತೆಯಲ್ಲಿ, ಚುನಾವಣೆ ನಡೆಯಿತು.

ಯಾವ ಚುನಾವಣೆಯಾದರೂ, ಮತಗಳಿಣಿಕೆಯಿಂದ ನಡೆಯಬೇಕಾದುದು ಶಾಸನಬದ್ಧವಾದ ನಿಯಮ. ಅದರಂತೆಯೇ, ಈ ಚುನಾವಣೆಯೂ ನಡೆದುಹೋಗಿದೆ. ಹೆಚ್ಚು ಓಟನ್ನು ಸಂಪಾದಿಸಲು ಶಕ್ತರಾದವರು ಗೆದ್ದಿದ್ದಾರೆ. ಅದಿಲ್ಲದವರು ಸೋತಿದ್ದಾರೆ. ಸರಿಯೇ. ಆದರೆ ಇದರಲ್ಲಿ ಒಂದಿಷ್ಟು ಸ್ವಾರಸ್ಯವಾದ ಭಾಗವಿದೆ. ಅದೇನೆಂದು ಕೇಳಿ!

ನಮ್ಮ ಮುನಿಸಿಪಲ್ ಕೌನ್ಸಿಲಿನಲ್ಲಿರುವ ಕರ್ತವ್ಯವನ್ನು ಅರಿತ, ಸಮರ್ಥರಾದ, ಅನುಭವಶಾಲಿಗಳಾದ, ವಾದಿಸಬಲ್ಲ ಕೌನ್ಸಿಲರುಗಳಲ್ಲಿ ಒಬ್ಬರಾದ ಶ್ರೀ. ಆನಂದ ತಳ್ವಾರರವರೇ ಈ ವಿಷಯಕ್ಕೆ ಮೊದಲು ಕೈ ಇಕ್ಕಿದವರು. ಹಲವು ಕೌನ್ಸಿಲರರಿಗೆ, ತಳ್ವಾರರ ಈ ಧೋರಣೆಯು, ಅವರವರ ಪ್ರತ್ಯೇಕ ಕಾರಣಗಳಿಂದ, ಬೇಡವಾದ ಬೇಸರದ ಗೊಂದಲವೆಂದೋ, 'ಅಧಿಕಪ್ರಸಂಗ' ವೆಂದೋ ತೋರಿಬಂದು, ತಳ್ವಾರರ ಬಾಯಿಮುಚ್ಚಿಸಿದ್ದರಾಗದೇ ಎಂಬಷ್ಟು ಅವಸರವೂ, ಆತುರವೂ ಉಕ್ಕಿದ್ದಿರಬಹುದಾದರೂ, ನ್ಯಾಯದೃಷ್ಟಿಯುಳ್ಳ ನಮ್ಮ ಚೆಯರ್‌ಮ್ಯಾನರ ಅನುಮತಿ ಮತ್ತು ಉತ್ತೇಜನದಿಂದ, ಈ ಚುನಾವಣೆಯ ಕುರಿತಾದ ತಳ್ವಾರರ ಅಭಿಪ್ರಾಯವು,—ಪಕ್ಷ ಸಾಧನೆಯ ಕೌನ್ಸಿಲರುಗಳಿಗಾಗಿ ಅಲ್ಲದಿದ್ದರೂ,—ಸಾರ್ವಜನಿಕರಿಗಾಗಿ ಪ್ರಕಟವಾಗಲು ಅವಕಾಶ ದೊರಕಿದುದು ಅಭಿನಂದನೀಯವಾದ ವಿಷಯ.

ನಗರಸಭೆಗಳ ಇತಿಹಾಸದಲ್ಲಿ ಅಪೂರ್ವವಾದ ಒಂದು ಸಂಗತಿಯು ಇಂದಿಲ್ಲಿ ನಡೆದು ಹೋಗಿದೆ. ಅದು ಹಾಗೆ ನಡೆಯಬೇಕಾದುದು ಕಾಲೋಚಿತವೇ ಆದರೂ, ಹಾಗೆ ಮನಃಪೂರ್ವಕವಾಗಿ, ಧೈರ್ಯದಿಂದ ಮುಂದೆ ಬರುವವರು ತೀರ ವಿರಳ. ನಮ್ಮಲ್ಲಿ ಹರಿಜನರಿಗಾಗಿ ಕಣ್ಣೀರು ಮಿಡಿಯುವವರಿದ್ದಾರೆ—ಅದರಲ್ಲಿಯೂ ಗಾಂಧಿಯವರ ಸಮಕ್ಷಮ—ಬಹಳ ಮಂದಿ ಇದ್ದಾರೆ; ನಿಜ. ಆದರೆ ಹಿಂದುಳಿದ ಅವರಿಗಾಗಿ, ಸ್ಥಳೀಯ ಸಂಸ್ಥೆಗಳಲ್ಲಿ ಇಂತಹ ಸ್ಥಾನಮಾನಗಳನ್ನು ಬಿಟ್ಟುಕೊಡಿರೆಂದು ವಾದಿಸುವವರೂ ಬಿಟ್ಟುಕೊಡುವವರೂ ಏಕಮತ್ಯದಿಂದ ಅವನ್ನು ಕೊಡಿಸಲೆತ್ನಿಸುವವರೂ ಎಷ್ಟು ಮಂದಿ ತಾನೇ ಇದ್ದಾರು? ಆ ರಹಸ್ಯವೀಗ ಈ ಚುನಾವಣೆಯಲ್ಲಿ ಒಡೆದು ತೋರುವಂತಿದೆ. ಮುಂದೆ ಹರಿಜನರ ಉಮೇದುವಾರಿಕೆಯನ್ನು ಯಾರೂ ಹೊರಬಾರದೆಂದು ಸೂಚಿಸುತ್ತಿದೆ.

ಶ್ರೀ. ತಳ್ವಾರರು ಇಲ್ಲಿ ವಿಶೇಷತಃ ಮಾಡಿರುವುದೆಂದರೆ ಇಷ್ಟೇ. ಯಾವುದನ್ನು ಕಾಂಗ್ರೆಸಿನ ಅಖಂಡಮುಖಂಡರೆಂಬವರು ಅಗತ್ಯವಾಗಿ ಮಾಡಲು ಯತ್ನಿಸಬೇಕಾಗಿದ್ದಿತೋ, ಅದನ್ನು ಕಾಂಗ್ರೆಸಿನವರಲ್ಲದ ಅವರು ಮಾಡಲು ನೋಡಿದ್ದಾರೆ. ಹರಿಜನರ ನಿಜವಾದ ಉನ್ನತಿಯ ಸಾಧನೆಯ ದೃಷ್ಟಿಯಿಂದ 'ಈ ಸ್ಥಾನವನ್ನು ನಮ್ಮ ಕೌನ್ಸಿಲಿನ ಹರಿಜನ ಪ್ರತಿನಿಧಿಗೇ ಕೊಟ್ಟು ಬಿಡುವ' ಎಂದಿದ್ದಾರೆ. 'ಹಿಂದುಸ್ಥಾನಕ್ಕೆ ಇದೊಂದು ಮೇಲ್ಪಂಕ್ತಿಯಾಗಿರಲೆ'ಂದೂ, ಕಾರ್ಯತಃ ಹರಿಜನರ ಹಕ್ಕುಬಾಧ್ಯತೆಗಳಿಗೆ ಮನ್ನಣೆ ಸಲ್ಲಲೆಂದೂ ಹಾರೈಸಿದ್ದಾರೆ. ಇಂತಹ ನ್ಯಾಯಸಮ್ಮತವಾದ ಕಾಲೋಚಿತ ವಿಷಯದಲ್ಲಿಯೂ, ನಮ್ಮ ಕೌನ್ಸಿಲರರಲ್ಲಿ ಕೆಲವರು ಮುಖ ಗಂಟಿಕ್ಕಿ ಕೊಂಡರೆಂದರೆ ಇದು ಎಂತಹ ಉದಾರಬುದ್ಧಿಯ, ಪತಿತಸಮೂಹೋದ್ಧಾರದ, ನಾಗರಿಕಕರ್ತವ್ಯದ ಶುಭಲಕ್ಷಣ?

ಮುಖ್ಯ, ತಳ್ವಾರರಿಂದ ಸೂಚಿಸಲ್ಪಟ್ಟೂ ಶ್ರೀ. ರಂಗರಾವ್ ತಲ್ಲೇರಿಕರರಿಂದ ಸಮರ್ಥಿಸಲ್ಪಟ್ಟೂ ಇದ್ದ ಕೌನ್ಸಿಲಿನ ಹರಿಜನಪ್ರತಿನಿಧಿಯಾದ ಶ್ರೀ. ಗುರುವನವರು, ಹರಿಜನರಿಗೆ ಒದಗಿಸಿ ಕೊಟ್ಟಿದ್ದ ಈ ಅಮೂಲ್ಯ ಸಂದರ್ಭವು ಹಾಳಾಗಿಹೋದರೂ ಹೋಗಲೆಂದು ದೊಡ್ಡ ಮನಸ್ಸು ಮಾಡಿ, ಆ ವೈಸ್‌ಚೆಯರ್‌ಮ್ಯಾನರ ಸ್ಥಾನವನ್ನು ತಾನಾಗಿಯೋ, ಇತರ ಕಾರಣಾಂತರಗಳಿಗಾಗಿಯೋ, ಸ್ವೀಕರಿಸಲು ಹಿಂಜರಿದ ಕಾರಣ, ಕೌನ್ಸಿಲಿನ ಹಲವು ಮೆಂಬರರಿಗೆ ಹರಿಜನರ ಕುರಿತು ಇರುವ ಅಭಿಮಾನವು ಅಥವಾ ದುರಭಿಮಾನವು ಪ್ರಕಟವಾಗುವ ಅವಕಾಶವು ತಪ್ಪಿ, ಅವರೆಲ್ಲರೂ ಮಾನಭಂತರೆನಿಸಿಕೊಂಡರು. ಒಂದು ವೇಳೆ, ಅದೇ ಹರಿಜನಪ್ರತಿನಿಧಿಯು ಗಟ್ಟಿಯಾಗಿ ನಿಂತಿದ್ದರೆ, ನಮ್ಮ ಕೌನ್ಸಿಲಿನ ಈ ಚುನಾವಣೆಯು ಸಂಭ್ರಮದ್ದಕುರಿತು, ಯಾವ ಮಾನಪತ್ರ ಬರೆಯಬೇಕಾಗಿದ್ದಿತೋ! ಯಾರು ಬಲ್ಲ?

ಸಮಗ್ರ ಭಾರತೆಯಲ್ಲೆಲ್ಲ ಹರಿಜನೋದ್ಧಾರಕ್ಕಾಗಿ ನಿರಂತರ ಪ್ರಯತ್ನಗಳು ನಡೆಯುತ್ತಿರುವಾಗ, ನಮ್ಮಲ್ಲಿ 'ಕರೆದು ಹೆಣ್ಣು ಕೊಟ್ಟರೆ ಅಳಿಯನಿಗೆ ಮಲರೋಗ'ವೆಂಬಂತಾದುದು ದೇಶದ ದೌರ್ಭಾಗ್ಯ. ಗಾಂಧಿಯವರ ಪುಣ್ಯ. ಇದರಲ್ಲಿ ಈ ಅಮೂಲ್ಯ ಸಂಧಿಯನ್ನು ಸಂಪೂರ್ಣ ಅಲಕ್ಷಿಸಿ, ಅನ್ಯಾಯವಾಗಿ ಕೈಬಿಟ್ಟ ಆ ಹರಿಜನ ಪ್ರತಿನಿಧಿಯನ್ನೇ ದೂರುವುದಿಲ್ಲ; ಕಾಂಗ್ರೆಸಿನ ಮುಖಂಡಅಖಂಡರೆಂಬವರು, ತಮ್ಮ ಕರ್ತವ್ಯನಿಷ್ಠೆಯಂತೆ, ಆತನನ್ನು ಹುರಿದುಂಬಿಸಿ ನೆಟ್ಟಗೆ ನಿಲ್ಲಿಸುವ ಯಾವ ಪ್ರಯತ್ನಕ್ಕೆ ಹೋಗಿದ್ದಾರೆ? ಅದಷ್ಟು ತಿಳಿಯಲಿ!

ಮಹಾನುಭಾವರೆ! ನಾವಿನ್ನು 'ಹರಿಜನ ಸೇವೆ' 'ಸಮಾಜೋದ್ಧಾರ' ಎಂಬ ತತ್ತ್ವೋಪದೇಶವನ್ನು ಸಾಕುಮಾಡೋಣ. ನಮ್ಮ ಆ ಬಾಯುಪಚಾರವು ಇಷ್ಟಕ್ಕೇ ನಿಂತರೆ ಅದೇ ನಮಗೆ ಗೌರವ. ಸಂದರ್ಭ ಸಿಕ್ಕಿದಾಗಲೆಲ್ಲ, ಮೇಲ್ಜಾತಿಯವರಿಗೇ ಮಣೆ ಇಡುತ್ತ, ಹರಿಜನರಿಗಾಗಿ ತುಟಿಯಲ್ಲೇ ಕನಿಕರಪಡುತ್ತ ಇರುವುದಿದು ತುಂಬ ಅಗೌರವ. ಆತ್ಮವಂಚನೆ ಏಕೆ? ಆಷಾಢಭೂತಿತನವೇಕೆ? ಬೇಡವಾಗಿದ್ದರೆ 'ಹೊರಗೆ ನಡೆಯಿರೆ'ಂದೇ ಹರಿಜನರಿಗೆ ನಿರ್ದಾಕ್ಷಿಣ್ಯವಾಗಿ ಹೇಳಬಾರದೇ? 'ಅಂತರಪಿಶಾಚತ್ವ'ವು ಯಾರಿಗೂ ಇರಬಾರದು. ಅದಕ್ಕೂ ನಾವೇ ಕಾರಣರಾಗಬೇಕೆ? ಏಕೆ?

'ಕಾಮನ್ಸ್'ರ ಮಂದಿರದಲ್ಲಿ!

ನಮ್ಮ ಬ್ರಿಟಿಷ್ ಕೊಲೊನಿಯಲ್ ಸೆಕ್ರಟರಿಗಳು 'ಕಾಮನ್ಸ್'ರ ಮಂದಿರದಲ್ಲಿ ಪ್ಯಾಲಸ್ತೇನಿನ ವಿಚಾರ ಮಾತಾಡಿದರು. 'ಅಲ್ಲಿನ ಕಾದಾಟವೆಲ್ಲ ಪರಸ್ಪರ ಬೆದರಿಕೆ, ಸಂಶಯಗಳಿಂದ ಉಂಟಾಗಿದೆ. ಅದರ ಬುಡವೇನೂ ಭದ್ರವಿಲ್ಲ' ಎಂದರು.

ಅಷ್ಟಕ್ಕೂ ಅದರೇನು? ಹೊರಗಿನಿಂದ ಬಂದ ಯಹೋದ್ಯರು ತಮ್ಮ ದೇಶವನ್ನು ಆಕ್ರಮಿಸುವರೆಂದು ಅರಬರಿಗೆ ಭಯ; ತಾವಲ್ಲಿ ನೆಲೆಯಾಗಿರುವುದು ಅರಬರಿಗೆ ಹಿತವಿಲ್ಲವೆಂದು ಯಹೋದ್ಯರಿಗೆ ಸಂಶಯ; ಇಷ್ಟೆ.

ಆದುದರಿಂದ, ಅವರವರನ್ನು ಅವರವರ ಪಾಡಿಗೆ ಬಿಟ್ಟುಬಿಟ್ಟರೆ, ಪರಸ್ಪರ ಕಾದಾಡಿಕೊಂಡು, ಶಾಂತಿಭಂಗ ಮಾಡುವರು ಎಂದು ಮಧ್ಯಸ್ಥರಾದ ಬ್ರಿಟಿಷರ ಸಂದೇಹ. ಆದ್ದರಿಂದ, ಅವರವರೊಳಗಿನ ವಿರುದ್ಧ ಸಾಧನೆಗಳನ್ನು ಅಲ್ಲಲ್ಲಿಯೇ ತಣಿಸಲೂ ಅವರವರ ಭಯಸಂಶಯಗಳನ್ನು ಅಷ್ಟಷ್ಟಕ್ಕೇ ನಿವಾರಿಸಲೂ ಬ್ರಿಟಿಷರು ಅಲ್ಲಿಯೇ ಇದ್ದು, ಶಾಂತಿಸಾಗರದ ತಕ್ಕಡಿಯನ್ನು, ಹಗಲಿರುಳೂ ಕೈಯಲ್ಲಿಯೇ ಹಿಡಿದುಕೊಂಡಿರಬೇಕಾದುದು ಅನಿವಾರ್ಯ.

ನೋಡಿದರೆ, ಬ್ರಿಟನಿಗೆ ಅಲ್ಲಿ ತನ್ನ ಹಿತರಕ್ಷಣೆಯ ಮಾತೇನೂ ತೋರುವುದಿಲ್ಲ. ಕೇವಲ ಅರಬರ ಕಲ್ಯಾಣಕ್ಕಾಗಿ, ಕೇವಲ ಯಹೋದ್ಯರ ಹಿತಚಿಂತನೆಗಾಗಿ, ಬ್ರಿಟನು ಬಿಟ್ಟ ಕೆಲಸ ಬಿಟ್ಟು, ಅಲ್ಲಿ ಪೇಚಾಡಬೇಕಾಗಿದೆ. ಅದಕ್ಕಾಗಿಯೇ ಅಂದರು, ನಮ್ಮ ಕಾಲೊನಿಯಲ್ ಸೆಕ್ರಟರಿಗಳು:—'ಇದು ಪುಣ್ಯಭೂಮಿ. ಇಲ್ಲಿ ನಾಗರಿಕ ಜಗತ್ತಿನ ಮೂರು ಮಹಾ ಧರ್ಮಗಳೂ ಶಾಂತಿಯಿಂದ, ಬಾಳಿ ಬದುಕಬೇಕು. ಹಾಗೆ ಆಗುವಂತೆ ಏರ್ಪಡಿಸುವುದೇ ಬ್ರಿಟಿಷ್ ಸರಕಾರದ ಮುಖ್ಯೋದ್ದೇಶ.'

ನಿಜವಾಗಿಯೂ, ಶಾಂತಿಸ್ಥಾಪನೆಗಾಗಿ ಹುಟ್ಟಿದವರೆಂದರೆ ಬ್ರಿಟಿಷರೇ ಅಲ್ಲವೇ? ಅಯರ್‌ಲ್ಯಾಂಡಿನಲ್ಲಿ ನೋಡಿ; ಬ್ರಿಟಿಷರು ಸ್ಥಾಪಿಸಿದ ಆ ಶಾಂತಿಧ್ವಜ ಹಾರಾಡುತ್ತಿದೆ. ಇಂಡಿಯದಲ್ಲಿ ನೋಡಿ; ಪ್ರತ್ಯೇಕ ಮತದಾರರ ಮಂಡಲಿಗಳನ್ನೇರ್ಪಡಿಸಿ, ಹಿಂದೂ-ಮುಸ್ಲಿಮರ ಒಗ್ಗಟ್ಟಿಗೆ ಹೆದ್ದಾರಿ ಮಾಡಿಕೊಟ್ಟ ಕೀರ್ತಿ ಬೆಳಗುತ್ತಿದೆ. ಇನ್ನು ಪ್ಯಾಲಸ್ತೈನಿನಲ್ಲಿ, ಅದೇ ಶಾಂತಿಪರ್ವದ ದೃಶ್ಯಗಳೇ, ಲೋಕಹಿತಾರ್ಥವಾಗಿ, ಪ್ರದರ್ಶಿಸಲ್ಪಟ್ಟರೇನು ನಷ್ಟ?

ಮಂಗಳೂರು

ಇದೇ ಜುಲ್ಯಾ ತಾ. ೬ರಲ್ಲಿ, ಇಲ್ಲಿನ ಕೆನರಾ ಬೇಂಕ್, ಲಿಮಿಟೆಡ್ ಎಂಬೀ ಸಂಸ್ಥೆಯು, ಮದ್ರಾಸ್ ಆಧಿಪತ್ಯದ ಕಣ್ಣಾನೂರು ಮತ್ತು ಮೈಸೂರು ದೇಶದ ಅರಸೀಕೆರೆ, ಹೀಗೆ ಎರಡು ಕಡೆಗಳಲ್ಲಿ ಎರಡು ಹೊಸ ಶಾಖೆಗಳನ್ನು ತೆರೆಯುಲಿಗ್ದೆ ಎಂಬುದನ್ನು ತಿಳಿಸಲು ಸಂತೋಷವಾಗುತ್ತದೆ. ಗಿರಾಕಿಗಳಿಗೆ ಇವುಗಳಲ್ಲಿ ಎಲ್ಲ ಬಗೆಯ ಬೇಂಕಿಂಗ್ ಸೌಕರ್ಯಗಳೂ ಒದಗಿಸಲ್ಪಡುವುವು.

ನಿನ್ನೆ ಸಂಜೆ, ಮುನಿಸಿಪಲ್ ಆಫೀಸಿನಲ್ಲಿ ಆ ಕೌನ್ಸಿಲಿನದೊಂದು ಸಭೆ ಸೇರಿ, ಹೊಸ ವ್ಯಾಸ್ ಚೆಯರ್‌ಮ್ಯಾನರನ್ನು ಆರಿಸಿತು. ರಾವ್ ಬಹದೂರ್ ಎನ್. ಎನ್. ಸುವರ್ಣರು ಆ ಸ್ಥಾನಕ್ಕೆ ರಾಜೀನಾಮೆಯನ್ನು ಕೊಟ್ಟಿದ್ದ ಕಾರಣ ಅದು ಅಂದಿನಿಂದ ಬರಿದಾಗಿಯೇ ಇದ್ದಿತು. ಈ ಚುನಾವಣೆಯಲ್ಲಿ ಡಾ. ಯು. ಪಿ. ಮಲ್ಯರ ಹೆಸರನ್ನು ವೈಸ್ ಚೆಯರ್‌ಮಾನ್ಯರ ಸ್ಥಾನಕ್ಕೆ ರಾವ್ ಬಹದೂರ್ ಎನ್. ವೆಂಕಟರಾಯರು ಸೂಚಿಸಿ, ಡಾ. ಸಂಜೀವ ಹೆಗ್ಗಡೆಯವರು ಅನುಮೋದಿಸಿದರು. ಶ್ರೀ. ಗುರುವನವರ ಹೆಸರನ್ನು ಶ್ರೀ. ಎಂ. ಎ. ತಳ್ವಾರರು ಸೂಚಿಸಿ, ಆರ್. ಆರ್. ತಲ್ಲೇರಿ ಕರ್ರವರು ಅನುಮೋದಿಸಿದರು. ಮಿ. ಸಿ. ಎಲ್. ಲೋಬರ ಹೆಸರನ್ನು ಮಿ. ಜಾನ್ ಗೊನ್ಸಾಲ್‌ವೀಸರು ಸೂಚಿಸಿ, ಮಿ. ಮಲ್ಲಾಡೋರವರು ಅನುಮೋದಿಸಿದರು. ಶ್ರೀ. ಗುರುವನವರು ಆ ಸ್ಥಾನವನ್ನು ಸ್ವೀಕರಿಸಲೊಪ್ಪದಿರಲು, ಮತ ತೆಗೆದು, ಡಾಕ್ಟರರಿಗೆ ೨೦ ಓಟುಗಳೂ, ಮಿ. ಲೋಡೋರವರಿಗೆ ೭ ಓಟುಗಳೂ ದೊರಕಿದುವು. ಡಾಕ್ಟರರು ಚುನಾಯಿಸಲ್ಪಟ್ಟರು.

ಈಗ ಖಾಲಿ ಬಿದ್ದಿರುವ ಮಿಲ್ಲಾಗ್ರೀಸ್ ವಾರ್ಡ್ ನಂಬ್ರ ೧೯ರ ಸಂಬಂಧದ ಚುನಾವಣೆಯು ಉಮೇದುವಾರರ ಮನಸಿಗಳು ಇದೇ ತಾ. ೧೩ರಲ್ಲಿ, ಗಂಟೆ ೧೦ರಿಂದ ಳರೊಳಗೆ, ತಲುಪತಕ್ಕುದು; ಅದೇ ತಾ. ೧೩ರೊಳಗೆ, ಉಮೇದುವಾರರು ತಮ್ಮ ಮನಸಿಯನ್ನು ಹಿಂದೆಗೆಯಬಹುದು. ಚುನಾವಣೆ ಇದೇ ತಾ ೨೦ರಲ್ಲಿ; ಮರುದಿನ ಗಂಟೆ ೧೦ಕ್ಕೆ ಓಟುಗಳನ್ನು ಎಣಿಸಲಾಗುವುದು.

ರಾವ್ ಬಹದೂರ್ ಎನ್. ಎನ್. ಸುವರ್ಣರ ರಾಜೀನಾಮೆಯಿಂದ ಬರಿದಾದ ಆ ಕೌನ್ಸಿಲ್ ಸೀಟಿನ ವಾರ್ಡಿಗೆ ಕಾವೊಬ್ಬ ಉಮೇದುವಾರರೆಂದು ಮಿ. ಟಿ. ಎಮ್. ಅಲ್ಫಾನ್ಸಾ, ನಿವೃತ್ತ ಚೀಫ್ ಎಕೌಂಟ್ಸೆಂಟ್, ರಾಯಲ್ ಎಯರ್ ಫೋರ್ಸ್, ಇವರು ತಿಳಿಸುತ್ತಾರೆ.

ಉಡುಪಿ ಮುನ್ಸಿಪಾಲಿಟಿಯ ಮತದಾರರ ಪಟ್ಟಿಯ ತನಿಖೆ, ಚುನಾವಣೆ ಮೊದಲಾದುವುಗಳ ಕುರಿತು, ಈ ಕೆಳಗಿನ ಕಾರ್ಯಕ್ರಮವು ಪ್ರಕಟವಾಗಿದೆ—ಪ್ರಿಲಿಮಿನರಿ ರೋಲುಗಳ ಪ್ರಕಟಣೆ ಇದೇ ತಾ. ೨; ಆಕ್ಷೇಪಣೆ ಅರ್ಜಿಗಳನ್ನು ಹಾಜರ್ಮಾಡುವ ಕೊನೆಯ ತಾರೀಖು ಇದೇ ತಾ. ೧೦; ಅವುಗಳ ಪ್ರಕಟಣೆ ಇದೇ ತಾ. ೧೩; ಅವುಗಳನ್ನು ಪರ್ಯಾಲೋಚಿಸುವ ಇದೇ ತಾ. ೧೬; ಕೊನೆಯ ಓಟರರ ಪಟ್ಟಿ ಪ್ರಕಟವಾಗುವ ಇದೇ ತಾ. ೨೫; ನಾಮನಿರ್ದೇಶನುಗಳನ್ನು ಸ್ವೀಕರಿಸುವ ತಾ. ೫-೮-'೩೬; ಅಭ್ಯರ್ಥಿಗಳ ತನಿಖೆ ತಾ. ೭-೮-'೩೬; ಯೋಗ್ಯ ನಾಮನಿರ್ದೇಶನುಗಳ ಪಟ್ಟಿಯ ಪ್ರಕಟಣೆ ತಾ. ೮—೮—'೩೬; ಪೋಲಿಂಗ್ ತಾ. ೧೮-೮-'೩೬; ಓಟುಗಳನ್ನು ಎಣಿಸುವ ತಾ. ೨೦—೮—'೩೬.

ಬೊಂಬೈ ಬಿಲ್ಲವ ಎಸೋಸಿಯೇಶನಿನವರು ತಾ. ೩೦-೫-೧೯೩೬ರಲ್ಲು ಶ್ರೀ ಗೋಕರ್ಣನಾಥ ದೇವಸ್ಥಾನದ ಭಂಡಾರಕ್ಕೆ ರೂಪಾಯಿ ೩,೫೦೦ ಕ್ರಯದ ಸ್ಥಿರಾಸ್ತಿಯನ್ನೂ ಸದರಿ ದೇವಸ್ಥಾನದಲ್ಲಿ ಶಾಶ್ವತವಾಗಿ ಮೂಸದಲ್ಲಿ ಮೂರು ದಿವಸ ಪೂಜಾ ವಿನಿಯೋಗಗಳು ಎಸೋಸಿಯೇಶನಿನ ಹೆಸರಲ್ಲಿ ಶಾಶ್ವತವಾಗಿ ನಡೆಯುವಂತೆ ನಗದಿಯಿಂದ ರೂಪಾಯಿ ೩೫೦ನ್ನೂ ಕೊಟ್ಟಿರುವದನ್ನು ತಿಳಿಸಲು ತುಂಬಾ ಸಂತೋಷಪಡುತ್ತೇವೆ. ಈ ವಿಷಯವಾಗಿ ಜಿಲ್ಲಾ ಬಿಲ್ಲವ ಯೂನಿಯನಿನ ಆಡಳಿತೆ ಮಂಡಲಿಯವರು ತಾ. ೧೪—೬—೧೯೩೬ರಲ್ಲು ಜರಗಿದ ಸಭೆಯಲ್ಲಿ ಎಸೋಸಿಯೇಶನಿನವರು ಕೊಟ್ಟ ಸ್ಥಿರಾಸ್ತಿ ಮತ್ತು ನಗದಿ ರೂಪಾಯಿಗಳನ್ನು ಸ್ವೀಕಾರ ಮಾಡಿ ಸದರಿ ಎಸೋಸಿಯೇಶನಿನವರ ಉದಾರತೆಯನ್ನು ಶ್ಲಾಘಿಸಿ ತಮ್ಮ ಕೃತಜ್ಞತೆಯನ್ನು ಸೂಚಿಸಿ ಪತ್ರವನ್ನು ಬರೆದಿರುತ್ತಾರೆ ಎಂತ ಕೆ. ಆರ್. ಗುರು, ಕಾರ್ಯದರ್ಶಿ ಇವರು ತಿಳಿಸುತ್ತಾರೆ.

ಮಂಗಳೂರು ಅಂಜುಮನ್ ಹಿದಾಯತುಲ್ ಇಸ್ಲಾಂ ಸಂಘದ ಮಹಾಸಭೆಯು ತಾ. ೩೮-೬-'೩೬ನೇ ಆದಿತ್ಯವಾರ ಶ್ಯಾಮು ಗಂಟೆ ೫ಕ್ಕೆ ಸರಿಯಾಗಿ ಕುದ್ರೋಳಿಯಲ್ಲಿ ಜನಾಬ್ ಎಂ. ಎ. ಅಬ್ದುಲ್ ಕರೀಮ್ ಸಾಹೇಬ್, ಎಂ. ಎ.ಯವರ ಅಧ್ಯಕ್ಷತೆಯಲ್ಲಿ ಜರಗಿತು. ದೇವರ ಪ್ರಾರ್ಥನೆಯೂ, ಹಾಡೂ, ಆದನಂತರ ಮುಂದಿನ ೧೯೩೬—೧೯೩೭ನೇ ಇಸವಿ ಬಗ್ಗೆ ಬೋಡ್ರ್ ಒಫ್ ಮೆನೇಜ್‌ಮೆಂಟ್ ಮೆಂಬರರ ಹೊಸ ಚುನಾವಣೆಯ ಚರ್ಚೆ ನಡೆದು ಕಡೆಗೆ ಪ್ರಕೃತ ಇರುವ ಮೆಂಬರರೇ ಮುಂದಿನ ಒಂದು ವರ್ಷಕ್ಕೆ ಮುಂದರಿಸಬೇಕೆಂದೂ, ಜನಾಬ್ ಶೇಕ್ ದಾವೂದ್ ಸಾಹೇಬರು ಸೂಚಿಸಿದ ತಾವು ಜನಾಬ್ ಯಂ. ಖಾಸಿಮ್ ಸಾಹೇಬರಿಂದ ಅನುಮೋದಿಸಲ್ಪಟ್ಟು, ಸರ್ವಾನುಮತದಿಂದ ಮಂಜೂರು ಮಾಡಲಾಯಿತು. ಅನಂತರ ಅಧ್ಯಕ್ಷರಿಗೂ ಸಭಿಕರಿಗೂ ವಂದನೋಕ್ತಿಗಳನು ಅರ್ಪಿಸಲಾಗಿ ಸಭೆಯು ಮುಕ್ತಾಯವಾಯಿತು.

ವಿದೇಶ

ಲಂಡನ್ನಿನ ಹೈಡ್ ಪಾರ್ಕಿನಲ್ಲಿ, ಲೇಬರ್ ಪಂಗ
ದವರದೊಂದು ಮಹಾಸಭೆ, ಮಿ. ಎಟ್ಲೆ ಮುಂತಾದ
ಿ ಸಮಾವೇಶದೊಡನೆ ಜರುಗಿ, ಇಟೆಲಿಯ ಮೇಲಿನ
ಂಕ್ಯನುಗಳನ್ನು ರದ್ದುಮಾಡಲು ಸರಕಾರವು
ಾರಟುದು ನ್ಯಾಯವಲ್ಲವೆಂಬುದರ ಕುರಿತು ತೀವ್ರ
ಷಣಗಳಾದುವ.

ಚೀನಾ, ವನಸ್ಪತಿ ಎಣ್ಣೆಯನ್ನು ಜರ್ಮನಿಗೆ ಒದ
ು, ಜರ್ಮನಿ ಚೀನಕ್ಕೆ ಆಯುಧಗಳನ್ನು ಪ್ರತಿಯಾಗಿ
ಡುವಂತೆ ಅವೆರಡು ದೇಶಗಳೊಳಗೆ ಒಂದು ಗುಪ್ತ
ಧಿಪತ್ರವಾಗಿದೆಯೆಂದೂ, ಈ ಪರಸ್ಪರ ವ್ಯಾಪಾರ
ಿ ಎಸ್ತೀರ್ಣ ಸುಮಾರು ೬೦ ಲಕ್ಷ ಪೌಂಡುಗಳಷ್ಟಾ
ುಹುದೆಂದೂ ಪದಂತಿ ಹುಟ್ಟಿ ಟೊಕಿಯೊದಲ್ಲಿ ವಿಸ್ಮ
ವುಂಟಾಗಿದೆ.

ಯುಗಸ್ಲಾವಿಯ ಪ್ರಾಂತದ ಒಂದು ಹಳ್ಳಿಯಲ್ಲಿ
ವರ್ಷದ ಒಬ್ಬ ಯುವತಿ; ರೂಪವತಿ; ತುಂಬ
ಶ್ವರ್ಯವಂತೆ; ಈಕೆಯ ಹೆಸರು ಜೇನಾ. ಈಕೆಗೆ
ದುವೆಯಾಯಿತೀಗ. ಗಂಡನು ಯಾರು ಬಲ್ಲಿರಾ?
೦ ವರ್ಷ ತುಂಬಿದ ಒಬ್ಬ ಶತಮಾನಾವಧಾನಿ—ಮಿ.
ೇವಿಚ್. ಈ ವರನು ಒಂದು ವರ್ಷದ ಹಿಂದೆಯೇ
ಾತ್ತಾಗಿದ್ದವನು. ಬಂದ ಅನೇಕ ವರರನ್ನು ಬಿಟ್ಟು,
ವಧು, ಒಂದು ವರ್ಷದ ವರೆಗೂ ಮದುವೆಯ
ೋಚನೆ ನಡೆಸಿ, ಕೊನೆಗೆ ಈ ಶತಾಯುವನ್ನೇ ಗಂಡ
ನ್ನಾಗಿ ವರಿಸಿದಳು.

ಜನಾಂಗಸಂಘದ ಎಸೆಂಬ್ಲಿಗೆ, ಇತಿಯೋಪಿ
ನರ ಡೆಲಿಗೇಶನನ್ನು, ನೇಗುಸರವರೇ ನಡೆಯಿಸಿ
ಂಡು ಹೋಗುವರೆಂದು ಪ್ರಕಟವಾಗಿದೆ.

ಪೂರ್ವ ಅಫ್ರಿಕದಿಂದ ಇಟೆಲಿಯ ಅನೇಕ ಸೈನ್ಯ
ು ರೋಮಿಗೆ ಹಿಂದಿರುಗಿ ಬಂದಿವೆ. ಈ ವೀರರ
ಾಗತವು ಇಲ್ಲಿ ಉತ್ಸಾಹಪೂರ್ವಕವಾಗಿ ನಡೆಯು
ದು. ಅನೇಕಾನೇಕ ಸಿಪಾಯಿಗಳಿಗೆ ಬೋನಸು
ು ದೊರೆಯಲಿರುವುದು.

ಜೆರುಸಲೇಮಿನ ಬೇಸಿನಿನ ಬಳಿ ೩ ಮಂದಿ ಬ್ರಿ
ದ್ ಕಾನ್‌ಸ್ಟೇಬಲರಿಗೆ ಗುಂಡು ತಗುಲಿ ಗಾಯ
ದ ಸಂಬಂಧ ಆ ಪಟ್ಟಣವು ೫೦೦ ಪೌಂಡುಗಳ
ಡ ತೆರಬೇಕಾಗಿದೆ.

ಜಾರ್ಜ ಸಾರಲ್ ಎಂಬವನೂ, ಅವನ ಇಬ್ಬರು
ಹೋದರಿಯರೂ, ಪ್ಯಾರಿಸಿನಲ್ಲಿ, ಸುಧ್ಯವಿರುವವರ
ಲ್ಲ ಹಿಡಿದು, ದೊಡ್ಡದೊಡ್ಡ ಪೊತ್ತಕ್ಕೆ ಅವರ ಜೀವ
ು ಮಾಡಿಸುತ್ತಾ, ಅನಂತರ ಸಮಯ ಸಾಧಿಸಿ,
ವಿಮೆ ಮಾಡಲ್ಪಟ್ಟವರನ್ನು ಕೊಲೆಮಾಡುತ್ತಾ ಬರು
ದ್ದರು. ಈ ಮೊಕದಮೆಗಳೀಗ ವಿಚಾರಣೆಯಾಗಿ
ರ್ಜನಿಗೆ ಘಾಸೀ ಸಜೆ; ಅವನ ಸಹೋದರಿಯರಿಗೆ
ಾ ೧೦ ವರ್ಷಗಳ ಕಠಿಣ ಸಜೆ.

ಜಪಾನಿನ ಶ್ರೀಮಂತರಾದ ಮಿತಸಾಯಿಯವರು
ಾನಿನ ವ್ಯವಸಾಯದ ವೃದ್ಧಿಗಾಗಿ ೧೪ ಲಕ್ಷ
ಂಡುಗಳ ದಾನವನ್ನು ಮಾಡಿರುವರು. ಜಪಾನ್
ರ ಅದೃಷ್ಟವೆಂದರೆ, ಹೀಗೆ!

ಅಬಿಸೀನಿಯವ ಮಾಜಿ ಚಕ್ರವರ್ತಿಗಳು ಜಿನೇ
ದಲ್ಲಿ ಜನಾಂಗ ಸಭೆಯಲ್ಲಿ ಸ್ಫೂರ್ತಿದಾಯಕವೂ,
ಾಣಾಜನಕವೂ, ಆದ ಒಂದು ವೀರ ಭಾಷಣವನ್ನು
ಡಿದರು. ಅವರು ವಿಷವಾಯುವಿನಿಂದ ಉಂಟಾದ
ೀಯವನ್ನು ವಿವರಿಸಿ ನಿಷೇಧಿಸಿದರು. ಇಟೆಲಿಯವ
ು ತೀರಾ ಅಧರ್ಮಯುದ್ಧಸಾಧನೆಯ ವಿಜಯ
ದರು. ಈ ಅನ್ಯಾಯವನ್ನು ಪರಿಹರಿಸಿ, ಕಾಪಾಡಿ
ದರು. ಇಟೆಲಿಯು ಅನೇಕ ವರ್ಷಗಳ ಯುದ್ಧ
ತೆಯನ್ನೂ, ಆದರ ಸ್ನೇಹಪಾತ್ರಕ್ಕೆ ಮರುಳಾದ
ೊಂದು ಯುರೋಪೀಯ ದೇಶವು ಅಬಿಸೀನಿಯ
ವಿರುದ್ಧವಾಗಿ ಆಚರಿಸಿದ ವಿಚಿತ್ರ ಸರಿಯನ್ನೂ
ತ್ತಾವಿಸಿ, ಜನಾಂಗಸಂಘದ ಸದಸ್ಯರುಗಳಾದ ೫೨
ಪ್ರತಿನಿಧಿಗಳೂ 'ಇಟೆಲಿ ಜಯಿಸುವುದಿಲ್ಲ'ವೆಂದಾಗ,
ು ಲೀಗಿನ ಯಶಸ್ಸಿನಲ್ಲಿ, ಈ ಮಾತಿನಲ್ಲಿ ಎಷ್ಟು
ವ್ವಾಸವಿರಿಸಿದ್ದೆನೆಂದು ನುಡಿದರು. 'ಇಟೆಲಿಗೆ ತಲೆ
ುವ ಮೂಲಕ, ನನ್ನ ಜನರ ಹಿತರಕ್ಷಣೆಯನ್ನು
ು ಕೆಡಿಸಲು ಹೊರಟಿಲ್ಲ' ಎಂದೂ, ಕೆಲವು ರಾಷ್ಟ್ರಗಳು
ಂಕ್ಯನುಗಳನ್ನು ಹೇಗೆ ಆಚರಣೆಗೆ ತರಲಿಲ್ಲ, ತಂದ
ಷ್ಟ್ರಗಳ 'ಕಣ್ಣಾಮುಚ್ಚಾಲೆ'ಯಾದರೂ ಹೇಗಿದ್ದಿ
ಎಂದೂ ಮುಂತಾಗಿ ಪಶ್ಚಾತ್ತಾಪಭರಿತ ವಾಕ್ಯಗ
ು ಆಡುತ್ತ, 'ನಿನ್ನ ೧೫ನೆಯ ಪರತ್ತು ಈಗ ಏ
ಿತು?' ಎಂದೂ, 'ನನ್ನ ಜನರಿಗೆ ನಾನು ಯಾವ
ೈರವನ್ನು ಈಗ ಕೊಡಬೇಕು?' ಎಂದೂ ಮನ
ುವಂತೆ ಮಾತಾಡಿದರು.

ಅಬಿಸೀನಿಯಾ ಚಕ್ರವರ್ತಿಗಳನ್ನು ಜನಾಂಗ
ೊಳಗೆ ಸೇರಿಸಿಕೊಂಡುದು ಇಟೆಲಿಗೆ ತುಂಬ
ಮಾಧಾನವಾಗಿದೆ—ದಿಗ್ವಿಜಯಪೂಜೆಯ ಸಂಭ್ರ
ಮಧ್ಯದಲ್ಲಿ, ಈ ಕರಡಿಯ ಮರಿಯೊಂದು ಏಕೆ
ು.

ಇಟೆಲಿಯವರು ಮೇಗಾ ಪ್ರಾಂತವನ್ನು ಸ್ವಾಧೀ
ಸಿಕೊಂಡಿದ್ದಾರೆ.

ಕ್ಯಾಲಸ್ಟೈನಿನ ಗಲಭೆಯು ಬೇಗನೇ ಶಾಂತವಾ
ಹುದೆಂದು ಅಲ್ಲಿನ ವಾರ್ತಾದಾಯಕರು ತಿಳಿಸು
ತ್ತಾರೆ.

ಹಿಂದೂದೇಶ

ಕೊಲೊಂಬೋದ ರೇಸ್ ಕೋರ್ಸಿನಲ್ಲಿ ೧೫—೧೦ ರುಪಾಯಿಗಳಿಗೆರಡು ಜೂಜಿನ ಕುದುರೆಗಳು ಮಾರಾಟವಾಗಿವೆ.

ಕಮ್ಯುನಿಷ್ಟರ ಸಾಹಿತ್ಯವನ್ನು ಗುಪ್ತವಾಗಿರಿಸಿ ಕೊಂಡಿದ್ದನೆಂದು ಲಾಹೋರಿನ ರಾಮಸಿಂಗ ಜಹಾರ್ ಎಂಬಾತನನ್ನು ಕೈದುಮಾಡಿದ್ದಾರೆ.

'ತ್ರಿಕಾಲ'ವೆಂಬ ಪುನೆಯ ಮರಾಠಿ ದೈನಿಕ ಪತ್ರಿಕೆಯೊಂದು ಮೊದಲು 'ಸೆಕ್ಯುರಿಟಿ'ಯಾಗಿ ಕಟ್ಟಿದ್ದ ೧ ಸಾವಿರ ರುಪಾಯಿಗಳನ್ನು ಹೋಗಲಾಡಿಸಿಕೊಂಡು, ಮತ್ತೆ ಕೇಳಲಾದ ೨ ಸಾವಿರದ ಭದ್ರತೆಯನ್ನು ತೆರಲು ಶಕ್ತ ಸಾಲದೆ, ಪತ್ರಿಕೆಯನ್ನೇ ಸದ್ಯ ನಿಲ್ಲಿಸಿದೆ.

ಶ್ರೀರಂಗದ ಶ್ರೀರಂಗನಾಥ ಸ್ವಾಮಿ ದೇವಸ್ಥಾನದ ಹೊರಗಿನ ಗೋಪುರದ ಗುರುಜು ಬಿರುಕು ಬಿಟ್ಟು ಕೆಳಗೆ ಬಿದ್ದು, ಒಬ್ಬನು ಸತ್ತನು, ಇನ್ನೊಬ್ಬನಿಗೆ ಪ್ರಾಣಾಂತಿಕ.

ಉದಕಮಂಡಲದಲ್ಲಿ ಕಳೆದ ಸಾರಿಗಾಳಿ-ಮಳೆಯಿಂದ ವಿದ್ಯುಚ್ಛಕ್ತಿಯ ದೀಪಗಳಿಗೆ ಅಪ್ಪದವಿಲ್ಲದಂತಾಗಿ, ತಾತ್ಕಾಲಿಕ ತೊಂದರೆ ಸಂಭವಿಸಿತೆಂದೂ, ಅಲ್ಲಲ್ಲಿ ಕೆಲವು ದೊಡ್ಡ ದೊಡ್ಡ ಮರಗಳು ಉರುಳಿನುವುವೆಂದೂ ಪ್ರಕಟವಾಗಿದೆ.

ಆಂಧ್ರ ವಿಶ್ವವಿದ್ಯಾನಿಲಯದ ಕಾನ್ವೊಕೇಶನ್ ಸಮಾರಂಭದ ೧೦ನೆಯ ಅಧಿವೇಶನವು ಇದೇ ಆಗೋಸ್ತು ತಾ. ೩೪ರಲ್ಲಿ ವಾಲ್ಟೇರಿನಲ್ಲಿ ಜರಗುವುದು.

ಕಣ್ಣಾನೂರು ಮುನಿಸಿಪಾಲಿಟಿಯ ಚೆಯರ್‌ಮ್ಯಾನರಾಗಿ ನಿವೃತ್ತ ತಹಶೀಲ್ದಾರರಾದ ಶ್ರೀ. ಟಿ. ಪಿ. ಕುಂಞಾರಾಮನ್‌ರವರು, ಪ್ರತಿಸ್ಪರ್ಧಿಗಳಿಲ್ಲದೆ, ಏಕಮತ್ತದಿಂದ ಆರಿಸಲ್ಪಟ್ಟರು.

